45. ಮೇಲೆ ಕೊಟ್ಟಿರುವ ತಖ್ತೆಯಲ್ಲಿ 372ನೆ ನಂಬರು ಸಕ್ಕರೆಯೇ ಉತ್ತಮವಾದ ರಖಮು. ಚರಕಿಯಲ್ಲಿ ತಯಾರಾದ ಕಚ್ಚಾ ಸಕ್ಕರೆಯ ಮಾದ್ರಿಗಳ ಪೈಕಿ ಅದು ಬಹು ಮೇಲಾದುದು. ಚರಕಿಯಲ್ಲಿ ಅದನ್ನು ತಿರಿಗಿಸುವಾಗ ಅದರ ತೂಕದಲ್ಲಿ ಸೇಕಡಾ $7\frac{1}{2}$ಯಂತೆ ನೀರನ್ನು ಬಿಟ್ಟು ಅದನ್ನು ತೊಳೆದದ್ದೇ ವಿನಾ ಅದಕ್ಕೆ ಮತ್ತೇನೂ ಹೆಚ್ಚು ಕೆಲಸವನ್ನು ಮಾಡಲಿಲ್ಲ. ತೊಳೆದಬಗೆ ಹೇಗೆಂದರೆ—ಕಾಕಂಬಿಯನ್ನು ಚರಕಿಯಲ್ಲಿ ಹಾಕಿ ತಿರುವಿ ಅದರಲ್ಲಿದ್ದ ಜೋನಿಯನ್ನೆಲ್ಲಾ ತೆಗೆದಮೇಲೆ ಚರಕಿಯು ತಿರುಗುತ್ತಿರುವ ಹಾಗೆಯೆ ಅದರೊಳಕ್ಕೆ ಸ್ವಲ್ಪ ನೀರನ್ನು ಹಾಕಲು ಅದು ಸಕ್ಕರೆಯಲ್ಲಿ ಬೆರತು ಉಳಿದಿದ್ದ ಜೋನಿಯನ್ನೆಲ್ಲಾ ತೊಳೆಕೊಂಡು ಹೊರಕ್ಕೆ ಬರುವುದು. ಹೀಗೆ ತೊಳೆದ ಸಕ್ಕರೆಯನ್ನು 6–7 ಗಂಟೆಯವರೆಗೂ ಬಿಸಿಗಿಸಿ ಅದರಲ್ಲಿರುವ ದೊಡ್ಡ ಹಳುಕುಗಳನ್ನು ಸಣ್ಣ ಹಳುಕುಗಳನ್ನು ವಿಂಗಡಿಸಲು ಬಂದರಿಯಾಡಿದ್ದಾಯಿತು. ಬಳ್ಳಾರಿಯಲ್ಲಿ ನಡೆದ ವಸ್ತುಪ್ರದರ್ಶನಕ್ಕೆ ಕಳುಹಿಸಿಕೊಟ್ಟ ಸಕ್ಕರೆಗಳ ಪೈಕಿ ಇದು ಬಂದು ಮಾದ್ರಿ. ಇದರಲ್ಲಿ ಶೇಕಡ ಅರ್ಧಕ್ಕಿಂತ ಕಮ್ಮಿಯಾಗಿ ಶರ್ಕರವಿದ್ರಾವ್ಯವು ಇತ್ತು. 372ನೆ ನಂಬರುಳ್ಳ ಮಾದ್ರಿಯನ್ನು ಬಂದರಿಯಾಡಿ ವಿಂಗಡಿಸಿದಾಗ ಉಳಿದ ಸಕ್ಕರೆಯೇ 371ನೆ ನಂಬರು ರಖಮು. ಈ ಎರಡು ರಖಮುಗಳೂ ಗುಣದಲ್ಲಿ ಬಂದೇಯಾದರೂ 371ನೆ ನಂಬರು ಮಾತ್ರ ಸ್ವಲ್ಪ ಕಪ್ಪು ಛಾಯೆಯುಳ್ಳದ್ದು. ಆದರೆ ಈ ಸಂವತ್ಸರ ನಡೆಸಿದ ಕೆಲಸದ ಫಲಿತಾಂಶವನ್ನು ನೋಡಿದರೆ ಚರಕಿಯಲ್ಲಿ ಕಚ್ಚಾ ಸಕ್ಕರೆಯನ್ನು ತೊಳೆಯುವದು ಲಾಭಕರವಾದುದೆಂದು ಹೇಳಲಾಗುವುದಿಲ್ಲ.

46. ಸಕ್ಕರೆಯ ರಖಮುಗಳಿಂದ ವಿಂಗಡಿಸಿದ ಜೋನಿ ಎಲ್ಲವನ್ನು ಒಂದಾಗಿ ಬೆರಸಿ ಇಟ್ಟರಲು ಒಂದು ತಿಂಗಳ ಮೇಲೆ ಅದರಿಂದ ಸಣ್ಣ ಹಳಕುಗಳುಳ್ಳ ನಯತರವಾದ ಸಕ್ಕರೆಯು ಉಂಟಾಯಿತು. ಇದನ್ನು ವಿಂಗಡಿಸಬೇಕಾದರೆ ಜೋನಿಯೆಲ್ಲವನ್ನು ಚರಕಿಯಲ್ಲಿ ಹಾಕಿ ತಿರುಗಿಸಿ ತೆಗೆಯಬೇಕಾಯಿತು. ಈ ರೀತಿಯಲ್ಲಿ ಸಿಕ್ಕಿದ ಸಕ್ಕರೆಯೇ 373ನೆ ನಂಬರಿನ ಮಾದರಿ. ಇದರಲ್ಲಿ ಬಹಳವಾಗಿ ಶರ್ಕರವಿದ್ರಾವ್ಯವಿತ್ತು. ಇದು 452–454ನೆ ನಂಬರ್ ರಖಮುಗಳಂತೆಯೇ ಇತ್ತು. ಈ 452–454ನೆ ನಂಬರುಳ್ಳ ರಖಮುಗಳಿಗೆ ದುಯ್ಯಂ ಸಕ್ಕರೆಯೆಂದು ಹೆಸರು ಕೊಟ್ಟಿರುತ್ತಾರೆ. ಇದು ಮೇಲೆ ವಿವರಿಸಿದಂತೆ ಕಚ್ಚಾ ಸಕ್ಕರೆಯನ್ನು ವಿಂಗಡಿಸುವುದರಲ್ಲಿ ಹೊರಟ ಜೋನಿಯನ್ನು ಮತ್ತೆಪ್ಪು ಕಾಸಿ ನಾಲ್ಕಾರು ವಾರಗಳ ವರಿಗೂ ತಲುಗಿಸದೆ ಬಂದು ಇಡೆಯಲ್ಲಿಟ್ಟರಲು ಅದರಿಂದ ಕಲ್ಲುಂದ ಸಕ್ಕರೆ ಮೇಲೆ ಕಂಡ 393ನೆ ನಂಬರ್ ರಖಮನ್ನು ತೋಧಿಸುವುದರಿಂದ ಹೊರಟ ಜೋನಿಯು ಸ್ವಲ್ಪವಾಗಿದ್ದುದರಿಂದ ಸುಲಭವಾಗಿ ಬೇಯಿಸಲು ಆಗಲಿಲ್ಲ. ಏನೋ ಕಾರಣದಿಂದ ಅವೆಲ್ಲವೂ ಸೀದುಹೋಯಿತು. ಆದುದರಿಂದಲೇ ಅದರಿಂದ ಮಾಡಿದ ಎರಡನೆ ಬೇಗೆಯ ಸಕ್ಕರೆಯು ಬಹಳ ಕಪ್ಪಾಯಿತು. 643 ಪೌಂಡು ಜೋನಿಯನ್ನು ಬೇಯಿಸಿದುದರಿಂದ $52\frac{1}{4}$ ಪೌಂಡ್‌ಗಳ ಎರಡನೆ ಬೇಗೆಯ ಕಾಕಂಬಿ ಆಯಿತು. ಇದರಿಂದ ಶೇಕಡ 19ರಷ್ಟು ನೀರು ಇಂಗಿಹೋದಂತಾಯಿತು. ಸರಾಸರಿಯಲ್ಲಿ 10 ಪೌಂಡಿಗಳ ಎರಡನೆ ಬೇಗೆಯ ಕಾಕಂಬಿಯಿಂದ 4·83 ಪೌಂಡಿಗಳ ಎರಡನೆ ಬೇಗೆಯ ಸಕ್ಕರೆಯಾದಂತಾಯಿತು. ಅಥವಾ

ಮೊದಲುಸಲ ಏಂಗಡಿಸಿದ ಜೋನಿಯ ಪೈಕಿ ಕೇಕಡ 3ಳರೆಪ್ಪು ಎರಡನೆ ಬೇಗೆಯ ಸಕ್ಕರೆಯಾಯಿತ್ತು. ಅಬ್ಬೆರಿನಲ್ಲ ಜೋನಿಯನ್ನು ಜೆಪ್ಪುಗಟ್ಟಲು ಇಟ್ಟದ್ದರಿಂದ ಹೊರವ ಕೇಕಡ 4ರಪ್ಪು ಸಕ್ಕರೆಯನ್ನು ಇದಕ್ಕೆ ಸೇರಿಸಿದರೆ ಮೊದಲು ಏಂಗಡಿಸಿದ ನೂರು ಪೌಂಡು ಜೋನಿಯಿಂದ 43 ಪೌಂಡಿಗಳ ಸಕ್ಕರೆ ಆದಂತಾಯಿತು. ಈ ಅಂಕಿಯು ಆಧಾರದಮೇಲೆ 10ನೆ ಕಲಮಿನಲ್ಲಿ ನಮೂದಿಸಿರುವ ಎರಡನೆ ಬೇಗೆಯ ಸಕ್ಕರೆಯ ಪ್ರಮಾಣವನ್ನು ಲಕ್ಕಾಪಾಡಿದೆ. ಈ ಸಂವತ್ಸರ ತಯಾರಾದ ಬೆಲ್ಲದಪೈಕಿ ಬಹಳ ಮೇಲೂ ಅಲ್ಲದೆ ಕೀಳೂ ಆಲ್ಲದೆ ಮಧ್ಯಸ್ಥವಾಗಿರುವ ನೂರು ಪೌಂಡು ಬೆಲ್ಲ ಆಗಬಹುದಾದ ಹಾಲಿನಿಂದ ತಯಾರಾದ ಮೊದಲು ಎರಡನೆ ಬೇಗೆಯ ಜರಕಿ ಸಕ್ಕರೆಯ ಪ್ರಮಾಣವು 12ನೆ ಕಲಮಿನಲ್ಲಿ ಕೊಟ್ಟಿರುವ ಅಂಕಿಗಳಿಂದ ತಿಳಿದುಕೊಳ್ಳಬಹುದು. ನಾನಾ ರಭಮು ಬೆಲ್ಲಗಳ ವಿಗ್ರಹದ ತಪ್ಪಲು 2ನೆ, 3ನೆ ನಂಬರ್ ತಖ್ತೆಗಳಲ್ಲಿ ಕೊಟ್ಟದೆ. ಬಾಕಿ ನಿಂತದ್ದೆಲ್ಲಾ ಜೋನಿಯಾಯಿತು. ಮೇಲೆ ಕಂಡ ತಖ್ತೆಯ 456-457ನೆ ನಂಬರುಗಳನ್ನು ನೋಡಿದರೆ ಈ ಜೋನಿಯಲ್ಲಿ ಕೇಕಡಾ 27.7ರಪ್ಪು ಕರ್ಕರವಿದ್ರಾವ್ಯವೂ 32ರಪ್ಪು ಸಕ್ಕರೆಯೂ ಇದೆಯೆಂದು ಗೊತ್ತಾಗುತ್ತದೆ. ಜೋನಿಯಲ್ಲಿ ಕರ್ಕರ ವಿದ್ರಾವ್ಯಕಿಂತ ಕರ್ಕರವು ಸ್ವಲ್ಪ ಹೆಚ್ಚಾಗಿ ಸೇರಿದೆಯೆಂದು ಇದರಿಂದ ತಿಳಿಯಬರುತ್ತದೆ. ಮೊದಲು ಸರ್ತಿ ಅಜಮಾಯಿಷಿ ಮಾಡಿದ್ದರಲ್ಲಿಯೇ ಇಂತಹವೇ ಲಾದ ಫಲ ಕಂಡುಬಂದುದರಿಂದ ಬಹು ಸಮರ್ಪಕವಾಗಿರುವುದು. ಮುಂದೆ ನಡೆಸುವ ಪರೀಕ್ಷೆಗಳಲ್ಲಿ ಹಾಲನ್ನು ಕಾಯಿಸುವಾಗ ಉಂಟಾಗುವ ಕರ್ಕರವಿದ್ರಾವ್ಯವು ಬಹಳಮಟ್ಟಿಗೆ ಕಮ್ಮಿಯಾಗುವದೆಂದು ಹಿಂದೆ ನಡೆಸಿದ ಪರೀಕ್ಷೆಗಳ ಅನುಭವದಿಂದ ಹೇಳಬಹುದಾಗಿದೆ. ಇದನ್ನೆಲ್ಲಾ ಆಲೋಚಿಸಿ ಕೊನೆಗೆ ಹೇಳಕ್ಕಕ್ಕದ್ದೇನೆಂದರೆ ಸುಮಾರಾಗಿ ಬಂಡವಾಳವಿಟ್ಟು ಸಕ್ಕರೆ ತಯಾರಿಗೆ ಉಪಯೋಗವಾದ ಯಂತ್ರಗಳನ್ನು ಕೊಂಡುಕೊಂಡರೆ ಈ ಸೀಮೆಯೆಲ್ಲಿ ಸಕ್ಕರೆಮಾಡುವ ಈಸಬನ್ನು ಬಹಳವಾಗಿ ಅಭಿವೃದ್ಧಿಗೆ ತರಬಹುದು. ಈಗ ಸಾಮಾನ್ಯವಾಗಿ ಉಪಯೋಗದಲ್ಲಿರುವ (ಬಲೆಯಮೇಲಿಟ್ಟು ಕಾಸುವ) ಕೊಪ್ಪರಿಗೆಗಳಿಗೆ ಬದಲಾಗಿ ಆವಿಯಿಂದ ಕಾಯಿಸುವ ಕೊಪ್ಪರಿಗೆಗಳನ್ನು ಉಪಯೋಗಿಸುವುದು ಬಳ್ಳೀದೆ; ಅವಶ್ಯವೆ ಎಂಬುದನ್ನು ಮುಂದೆ ನಡೆಸುವ ಪರೀಕ್ಷೆಗಳಿಂದ ತಿಳಿಯಬೇಕಾಗಿದೆ.

47. ಕಬ್ಬನ್ನು ಆಲೆಯಾಡುವುದು.—* ಇಕ್ಷು ಶರ್ಕರಕ್ಕಾಗಿ ಕಬ್ಬನ್ನು ಬೆಳೆಯುತ್ತೇವೆ. ಈ ಪದಾರ್ಥವು ಕಬ್ಬಿನಲ್ಲಿ ವಿನಾ ಮತ್ತಾವುದರಲ್ಲಿಯೂ ದೊರೆಯುವದಿಲ್ಲ. ಕಬ್ಬಿನಲ್ಲಿ ಸಣ್ಣ ಸಣ್ಣ ಕೊಳಬಿಗಳು ಅಥವಾ ರಂಧ್ರಗಳಿವೆ. ಇವುಗಳತುಂಬಾ ಹಾಲಿದೆ. ಹಾಲನ್ನು ತೆಗೆದ ತರುವಾಯ ಕೊಳಬಿಗಳಾಗಿರುವ ಗಟ್ಟಿ ಪದಾರ್ಥವು ಯಾವ ಕೆಲಸಕ್ಕೂ ಬರುವುದಿಲ್ಲ. ಇದನ್ನು ಬೆಲ್ಲ ಬೇಯಿಸುವುದಕ್ಕೆ ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಈ ಸಪ್ಪೆ ಅಥವಾ ಬೆಂಡು ಎಂಬುವ ಗಟ್ಟಿ ಪದಾರ್ಥದಲ್ಲಿ ಸ್ವಲ್ಪವೂ ಹಾಲು ನಿಲ್ಲದಂತೆ ತೆಗೆದುಹಾಕಲು ಆಗುವುದಿಲ್ಲ. ಎಷ್ಟು ಬಲವಾದ ಆಲೆಯನ್ನು ಉಪಯೋಗಿಸಿದರೂ ಸಪ್ಪೆಯಲ್ಲಿ ಸ್ವಲ್ಪವಾದರೂ ಹಾಲು ನಿಲ್ಲುತ್ತದೆ. ಹೀಗೆ ತುಸ ಹಾಲು ನಿಂತ ಸಪ್ಪೆಗೆ ಈ ದೇಶದಲ್ಲಿ ಹೀದೆ (begasse) ಯನ್ನುವರು. ಇತರ ಸ್ಥಳಗಳಲ್ಲಿ ಹಿಪ್ಪೆಯನ್ನುವರು. ಬಂಭತ್ತು ಕಣಿಗಳಿರುವ ಬಹು ಬಲವಾದ ಆಲೆಯಿಂದ ಹೊರಡುವ ಹೀದೆಯಲ್ಲೂ ಕೇಕಡಾ 5ಕ್ಕಿಂತ ಹೆಚ್ಚಾಗಿಯೇ ರಸವು ನಿಂತುಹೋಗುತ್ತದೆ. ಆಲೆಯು ದೊಡ್ಡದಾಗಿದ್ದು ಕಣಿಗಳನ್ನು ಬಿಗಿಮಾಡಿದಷ್ಟೂ ಹೀದೆಯಲ್ಲಿ ಹಾಲು ನಿಲ್ಲುವುದು ಕಮ್ಮಿಯಾಗುತ್ತದೆ. ಈ ಬಂಭತ್ತು ಕಣಿಗಳಿರುವ ಆಲೆಗಳಿಂದ ಕಬ್ಬನ್ನು ಬಹಳ ಬಲವಾಗಿ ಹಿಂಡಬಹುದಾದ ಬಂದೇ ಅನುಕೂಲವಲ್ಲ. ಮೂರು ಮೂರು ಕಣಿಗಳನ್ನು ದಾಟಿಸಾಗೆಲ್ಲ ಕಬ್ಬಿನಮೇಲೆ ನೀರು ಚಿಮುಕಿಸುವದಕ್ಕೆ ಏರ್ಪಾಡು ಮಾಡಿರುವದರಿಂದ ಕಬ್ಬಿನೊಳಗಿನ ಹಾಲು ನೀರಿನೊಂದಿಗೆ ಬೆರತು ತೆಳುವಾಗಿ ಹೀದೆಯಲ್ಲಿ ನಿಲ್ಲುವ ಹಾಲೂ ತೆಳುವಾಗುವುದು. ಆದುದರಿಂದ ಹೀದೆಯಲ್ಲಿ ನಿಂತು ಹೋಗುವ ಸಕ್ಕರೆಯು ಕಮ್ಮಿಯಾಗುವುದು. ಹೀದೆಯು ಕಬ್ಬಿನ ಹಾಲಿನಲ್ಲಿ ಅದ್ದಿ ಹಿಂಡಿದ ಅರಳಿಯಂತೆ, ಅದನ್ನು ಬಲವಾಗಿ ಹಿಂಡಿದಷ್ಟೂ ಆದರಿಂದ ಹಾಲು ಹೆಚ್ಚಾಗಿ ಹೊರಡುವುದು. ಹೀಗೆ ಹಿಂಡಿದ್ದನ್ನು ತಿರಿಗಿ ನೀರಿನಲ್ಲಿ ಅದ್ದಿ ಮುಂದಿನಂತೆಯೇ ಹಿಂಡಿದರೆ ಮೊದಲಿಗಿಂತ ತೆಳುವಾದ ರಸವು ಹೊರಡುವುದು. ಹೀಗೆಯೇ ಬಹಳಸಲ ಮಾಡಿದರೆ ಕೊನೆಗೆ ಅರಳಿಯಲ್ಲಿ ಕಬ್ಬಿನ ರಸವು ಸಾಮಾನ್ಯವಾಗಿ ಇಲ್ಲದೇನೆ ಹೋಗುತ್ತದೆ. ಹೀಗೆ ಮೂರು ಕಣಿಗಳ ಬಂದು ಬಿಲಿಯಿಂದ ಮತ್ತೊಂದು ಬಿಲಿಗೆ ಕಬ್ಬುಹಾದು ಹೋಗುವಾಗ ಅದರಮೇಲೆ ನೀರನ್ನು ಚಿಮುಕಿಸುವುದರಿಂದ ಹೆಚ್ಚಾಗಿ ರಸವನ್ನು ತೆಗೆಯಬಹುದು. ಹಾಗೆ ಮಾಡದಿದ್ದರೆ ಆಗಲಾರದು. ಆಲೆಯು ದೊಡ್ಡದಾಗಿಯೂ ಬಲವಾಗಿಯೂ ಇದ್ದಷ್ಟೂ ಹೀದೆಯಲ್ಲಿ ನಿಂತುಹೋಗಿ ನಷ್ಟವಾಗುವ ಹಾಲು ಕಡಿಮೆಯಾಗುವುದು. ಸ್ವಲ್ಪ ಅರಳಿ ಸ್ವಲ್ಪ ಹಾಲನ್ನು ಮಾತ್ರ ಹೀರಿಕೊಳ್ಳುತ್ತದೆ. ಅರಳಿ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿ ಹಾಲನ್ನು ಹೀರುತ್ತದೆ. ಹೀಗೆಯೇ ಕಬ್ಬಿನಲ್ಲಿ ಬೆಂಡು ಸ್ವಲ್ಪವಾಗಿದ್ದಹಾಗೆಲ್ಲಾ ಹೀದೆಯಿಂದ ಹಾಲು ನಷ್ಟವಾಗುವುದು ಕಮ್ಮಿ. ಆದುದರಿಂದ ಇತರ ಸಂಗತಿಗಳು ಬಂದೇ ವಿಧವಾಗಿರಲು ಹೆಚ್ಚಾಗಿ ಬೆಂಡಿರುವ ಕಬ್ಬಿಗಿಂತಲೂ ಸ್ವಲ್ಪವಾಗಿ ಬೆಂಡಿರುವ ಕಬ್ಬು ಒಳ್ಳೀದು. ಆದುದರಿಂದ ಆಲೆಯ ಯೋಗ್ಯತೆಯನ್ನು ಪರೀಕ್ಷಿಸುವಾಗ ಈ ವಿಷಯವನ್ನು ಯೋಚಿಸಬೇಕು.

---

* ಸಕ್ಕರೆಯನ್ನು ಅನೇಕ ಪದಾರ್ಥಗಳಿಂದ ತಯಾರುಮಾಡುತ್ತಾರೆ. ಅವುಗಳಲ್ಲಿ ಕಬ್ಬು ಮುಖ್ಯವಾದದ್ದು. ಇದರಲ್ಲಿ ತಯಾರಾಡುವ ಸಕ್ಕರೆಗೆ ಕಬ್ಬಿನ ಸಕ್ಕರೆಯೆಂದು ಹೆಸರು. ಕಬ್ಬಿನಲ್ಲಿರುವ ಸಕ್ಕರೆಯಾಗುವ ಪದಾರ್ಥಕ್ಕೆ ಇಕ್ಷುಶರ್ಕರವೆಂದು ಹೆಸರು.

5ನೇ ನಂಬರ್ ತಖೆ

ಸಾಧಾರಣವಾದ ಮೂರು ಕಬ್ಬಿಣದ ಉಣಿಗಳ ಆಲೆಯಲ್ಲಿ ಕಬ್ಬಾಡಿಸಿದಾಗ ಹೀದೆಯಲ್ಲಿ ಉಳಿದ ಹಾಲಿನ ಶೇಕಡ

| ಜಂಜರ್ ನಂಬರು | ಉಪಯೋಗಿಸಿದ ಕಬ್ಬಿನ ತೂಕ ಪೌಂಡುಗಳು. | ತೆಗೆದ ಹಾಲಿನ ತೂಕ ಪೌಂಡುಗಳು. | ಹಾಲು ತೆಗೆದುದರ ಶೇಕಡ | ಹೀದೆಯ ತೂಕ ಪೌಂಡುಗಳು. | ನೀರು ತೆಗೆದುದರ ಶೇಕಡ | ಹಾಲಿನಲ್ಲಿರುವ ಘನ ಪದಾರ್ಥಗಳ ಒಟ್ಟು | ಹೀದೆಯಲ್ಲಿನ ತೇವ. | ಹೀದೆಯಲ್ಲಿರುವ ಬಿಂಕಿನ ಶೇಕಡ | ಹೀದೆಯಲ್ಲುಳಿದ ಹಾಲಿನ ಶೇಕಡ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 281 | 343¾ | 200½ | 58·0 | 137½ | 60·2 | 20·9 | 59·06 | 10.08 | 31·9 |
| 283 | 414¼ | 252 | 60·8 | 148 | 64·3 | 21·0 | 56·51 | 10·17 | 28·4 |
| 285 | 431 | 259½ | 60·0 | 162½ | 62·3 | 21·0 | 56·89 | 10·35 | 30·3 |
| 289 | 451 | 276½ | 61·3 | 166 | 63·2 | 20·2 | 56·70 | 10,66 | 29·3 |
| 291 | 472 | 289½ | 61·5 | 170 | 64·0 | 20·0 | 59·59 | 9:18 | 29·5 |
| 292 (5) | 450½ | 224 | 47·7 | 215 | 52·3 | 19·6 | 55·65 | 14·69 | 38·7 |
| 294 | 413¼ | 283¼ | 68·6 | 120 | 71·0 | 20·6 | 55·80 | 8·62 | 22·3 |
| 296 | 406 | 262½ | 64·5 | 137½ | 66·2 | 19·9 | 59·55 | 8·69 | 28·5 |
| 298 | 178 | 128 | 71·9 | 46¼ | 74·1 | 20·6 | 57·41 | 7·17 | 20·2 |
| 300 | 467¾ | 284½ | 60·8 | 179¾ | 61·6 | 21·1 | 51·61 | 13·28 | 29·0 |
| 302 | 428½ | 280 | 65·3 | 141 | 67·1 | 21·1 | 56·73 | 9·24 | 26·1 |
| 304 | 451 | 284¾ | 62·3 | 162¼ | 64·5 | 20·9 | 51·26 | 12·50 | 26·3 |
| 306 | 473 | 314½ | 86·4 | 149½ | 68·4 | 21·3 | 53·75 | 10·02 | 24·0 |
| 307 | 472 | 311½ | 66·0 | 151¼ | 67·8 | 20·1 | 55·50 | 9·28 | 24·8 |
| 309 | 370½ | 251 | 67·7 | 111½ | 70·0 | 20·7 | 57·63 | 8·20 | 23·7 |
| 311 | 433¾ | 285 | 65·7 | 139 | 68·0 | 20·8 | 53·86 | 10·24 | 24·2 |
| 313 (6) | 494 | 282½ | 57·2 | 200½ | 59·4 | 17·9 | 47·64 | 17·04 | 28·4 |
| 316 | 379½ | 253½ | 66·3 | 117½ | 69·0 | 20·6 | 51·40 | 10·93 | 22·5 |
| 318 | 377¼ | 253¾ | 67·1 | 118 | 78·8 | 19·8 | 56·94 | 9·06 | 24·4 |
| 322 | 353 | 225 | 63·7 | 120 | 66·0 | 20·4 | 52·59 | 11·54 | 25·4 |
| 324 | 386 | 269½ | 69·2 | 118 | 69·4 | 19·6 | 53·75 | 10·15 | 22·8 |
| 329 | 431¾ | 283¼ | 65·6 | 136 | 68·5 | 19·9 | 52·04 | 11·04 | 23·0 |
| 331 | 454 | 298½ | 65·7 | 148 | 67·4 | 18·9 | 52·30 | 11·56 | 23·7 |
| 332 | 416½ | 266 | 63·9 | 137½ | 67·0 | 19·0 | 53·95 | 11·02 | 24·7 |
| 336 | 469⅓ | 314 | 66·8 | 138 | 70·6 | 18·6 | 53·71 | 10·00 | 21·6 |
| 395 (7) | 479 | 314 | 65·5 | 153½ | 67·9 | 17·0 | 60·90 | 8·55 | 25·8 |
| 397 (7) | 446 | 286 | 64·1 | 147½ | 66·9 | 17·7 | 59·80 | 9·04 | 26·4 |
| 399 (7) | 484 | 318 | 65·7 | 152 | 68·6 | 17·4 | 58·50 | 8·75 | 24·8 |
| 401 (7) | 510 | 328 | 64·3 | 172½ | 66·2 | 17·5 | 60·30 | 8·75 | 27·4 |
| 403 (7) | 519 | 342 | 64·6 | 173 | 67·3 | 17·9 | 60·50 | 8·60 | 26·4 |
| 405 (7) | 418 | 274 | 65·5 | 128 | 69·4 | 17·1 | 58·20 | 9·12 | 23·6 |
| 407 (7) | 408 | 269 | 65·9 | 131 | 67·9 | 18·5 | 62·00 | 7·68 | 26·8 |
| 409 (7) | 537 | 340 | 63·3 | 189 | 64·8 | 15·1 | 59·30 | 9·71 | 28·2 |

(1) ತೆಗೆದಹಾಲಿನ ಶೇಕಡಾ ಕಂಡುಹಿಡಿಯುವರೀತಿ:—ಹಾಲಿನ ತೂಕವನ್ನು 100ರಿಂದ ಗುಣಿಸಿ ಕಬ್ಬಿನತೂಕದಿಂದ ಭಾಗಿಸುವುದು.

(2) ಹೀದೆಯೆಂದರೆ ಹಾಲುಹಿಂಡಿದ ತರುವಾಯ ಆಲೆಯಿಂದ ಹೊರಡುವ ಕೆಲಸಕ್ಕೆ ಬಾರದಕಬ್ಬು.

(3) ಹೀದೆಯತೂಕದ ಆಧಾರದಮೇಲೆ ತೆಗೆದಹಾಲಿನ ಶೇಕಡಾವನ್ನು ಕಂಡುಹಿಡಿಯುವರೀತಿ:—ಹೀದೆಯ ತೂಕವನ್ನು 100ರಿಂದ ಗುಣಿಸಿ ಕಬ್ಬಿನತೂಕದಿಂದ ಭಾಗಿಸಿ ಲಬ್ಧವನ್ನು 100ರಿಂದ ಕಳೆಯುವದು.

ಹೀದೆಯಿಂದ ಹಾಲು ಬಹುಜೀಗನೆ ಆರಿ ಹೋಗುತ್ತದೆಯಾದುದರಿಂದ 4ನೆ ಕಲಂಮಿನಲ್ಲಿ ನಮೂದಿಸಿರುವ ಸಂಖ್ಯೆಯಷ್ಟೂ 6ನೆ ಕಲಂಮಿನಲ್ಲಿ ಕೊಟ್ಟಿರುವ ಅಂಕಿಯೂ ಖಂಡಿತವಾದುದಲ್ಲ.

6ನೆ ನಂಬರ್-ತೆಲೆ.

ಆಲೆಯಾಸುವದಕ್ಕಿಂತ ಮುಂಚೆ ಕಬ್ಬನ್ನು ಮುರಿಯುವದರಿಂದುಂಟಾಗುವ ಫಲವನ್ನು ತೋರಿಸುವ ಪಟ್ಟಿ. 1905ನೆಇಸವಿ ಏಪ್ರಿಲ್ 22ನೆ ತಾರೀಖಿನಲ್ಲಿ ಕಡಿದು ಬೀರಜೀರಿ ಕಾಲಗಳವರಿಗೂ ಇಟ್ಟಿದ್ದು ಆಲೆ ಯಾಡಿದ ರಸವನ್ನು ವಿಗ್ರಹ ಮಾಡಿದ ಫಲಿತಾರ್ಥ.

| ನಂಬರು. | ತಾರೀಖು. | ತೂಕ. ಹೊಲದಲ್ಲಿದ್ದ ತೊಳೆ ಹಾಕಿದ ಗಳು. | ತೂಕ. ಬಿಗ್ಹಿಸಿದ ನಂತರ ಬಾಕಿ ಹುಗಳು. | ಕರ್ಚರದ ಕೇಕಡ. | ಕರ್ಚರ ವಿದ್ರಾವ್ಯದ ಕೇಕಡ. | ಗಟ್ಟಿ ಪದಾರ್ಥಗಳ ಕೇಕಡ. | ಕಬ್ಬಿನಲ್ಲಿ ಕೇಕಡಾ 10ರಷ್ಟು ಜೊಂಡು ಇದೆಯೆಂದು ವಜಾ ಮಾಡಿ ಉಳಿದ ತೂಕದಮೇಲೆ ಲೆಕ್ಕಾ ಚಾರ ಮಾಡಿದ್ದರಲ್ಲಿ ಬಂದದ್ದು. ಕರ್ಚರದ ಕೇಕಡ. | ಕರ್ಚರ ವಿದ್ರಾವ್ಯದ ಕೇಕಡ. | ಒಟ್ಟು ಗಟ್ಟಿ ಪದಾರ್ಥಗಳ ಕೇಕಡ. | ಷರಾ. |
|---|---|---|---|---|---|---|---|---|---|---|
| 338 | 22 4 05 | 26 | 26 | 16·40 | ·87 | 17·70 | 16·40 | ·87 | 17·7 | |
| 339 | 22 4 05 | 25¼ | 25¼ | 17·30 | ·87 | 18·60 | 17·30 | ·87 | 18·6 | |
| 340 | 24 4 05 | 26¼ | 25½ | 13·75 | 3·67 | 18·60 | 13·16 | 5·51 | 17·8 | |
| 341 | 26 4 05 | 26½ | 24½ | 14·35 | 5·20 | 19·20 | 12·94 | 4·69 | 17·7 | |
| 343 | 28 4 05 | 24¾ | 21¾ | 13·40 | 6·25 | 20·80 | 11·56 | 5·39 | 17·9 | |
| 344 | 28 4 05 | ... | .. | 15·10 | 5·81 | 22·50 | .. | .. | .. | ತೆಂಡೆ ಹೊಡೆಯದೆ ಬಿಟ್ಟಿತ್ತು. |
| 345 | 1 5 05 | 24 | 20 | 13·35 | 7·30 | 22·00 | 10·87 | 5·94 | 17·9 | |
| 346 | 1 5 05 | 24¾ | 20½ | 13·35 | 7·10 | 21·70 | 10·83 | 5·76 | 17·6 | |
| 347 | 3 5 05 | 23 | 18¼ | 13·70 | 7·60 | 22·20 | 10·58 | 5·87 | 17·1 | |
| 348 | 5 5 05 | 26 | 22 | 13·45 | 8·50 | 22·70 | 11·15 | 7·05 | 18·8 | |
| 350 | 7 5 05 | 21 | 15½ | 13·90 | 8·60 | 23·80 | 9·90 | 6·10 | 16·9 | |
| 351 | 7 5 05 | 24 | 18¼ | 13·35 | 8·80 | 23·70 | 10·07 | 6·64 | 17·9 | |
| 352 | 9 5 05 | 26½ | 20 | 14·70 | 8·80 | 24·10 | 10·70 | 6·41 | 17·5 | |
| 353 | 12 5 05 | 22½ | 17 | 12·70 | 9·40 | 24·20 | 9·26 | 6·85 | 17·6 | |
| 354 | 12 5 05 | 26½ | 19¼ | 14·15 | 9·20 | 24·80 | 9·82 | 6·38 | 17·2 | |
| 355 | 15 5 05 | 24½ | 16¾ | 12·95 | 10·87 | 25·50 | 8·38 | 7·03 | 16·5 | |
| 356 | 17 5 05 | 24½ | 16¾ | 12·25 | 10·90 | 25·40 | 7·93 | 7·05 | 16·4 | |
| 357 | 17 5 05 | 24¾ | 17 | 12·70 | 10·10 | 23·90 | 8·30 | 6·61 | 15·6 | |
| 358 | 19 5 05 | 24½ | 16¾ | 15·05 | 10·50 | 25·40 | 6·80 | 6·79 | 16·4 | |
| 359 | 25 5 05 | 37⅓ | 23½ | 7·30 | 12·80 | 23·70 | 4·57 | 7·50 | 13·8 | ತೆಂಡೆ ಹೊಡೆಯದೆ ಬಿಟ್ಟಿತ್ತು. |
| 360 | 25 5 05 | 25½ | 15½ | 12·30 | 11·60 | 26·60 | 6·95 | 6·55 | 15·0 | ಡಿಟೋ |

(4) ಬೆಂಡೆಂದರೆ :—ಕಬ್ಬಿನಿಂದ ರಸವನ್ನೆಲ್ಲಾ ಚನ್ನಾಗಿ ತೆಗೆದುಹಾಕಿದ ಮೇಲೆ ಉಳಿಯುವಂತಾದ್ದು.

(5) 292ನೆ ನಂಬರ್ ರಸವನ್ನು ತೆಗೆದ ಕಬ್ಬು ಕುರಿಗಿಣ್ಣಾಗಿತ್ತು. ಈ ರಖಂಮಿನಲ್ಲಿ ಬೆಂಡು ಹೆಚ್ಚಾಗಿ ಕಂಡುಬಂದು ಕಮ್ಮಿಯಾಗಿ ಹಾಲು ಹೊರಟಿದ್ದಕ್ಕೆ ಇದೇ ಕಾರಣ.

(6) 313ನೆ ನಂಬರಿನ ಹಾಲನ್ನು ತೆಗೆದ ಕಬ್ಬು ಸಂಣದಾಗಿ ಗಟ್ಟಿಯಾಗಿರುವ ಚೀಣಕಬ್ಬು ಎಂಬುವ ಜಾತಿ.

(7) 395ನೆ ನಂಬರಿನಿಂದೀಚಿನ ರಖಮುಗಳ ಹೀದಗಳನ್ನು ಇತರ ರಖಮುಗಳ ಹೀದೆಗಳಿಗಿಂತ ಬೇಗನೆ ತೂಕಮಾಡಿ ಮೂದರಿ ತೆಗದು ಒಣಗಿಸಿದ್ದಾಯಿತು—ಆದುದರಿಂದ ಈ ರಖಮುಗಳ ವಿಷಯವಾಗಿ 9—10ನೆ ಕಲಮುಗಳಲ್ಲಿ ಕೊಟ್ಟಿರುವ ಸಂಖೆಗಳು ಅದೇ ಕಲಮುಗಳಲ್ಲಿ ಕೊಟ್ಟಿರುವ ಇತರ ಸಂಖೆಗಳಿಗಿಂತ ಸರಿಯಾದವು.

48. ಈ ವರುಷ ನಡಿಸಿದ ಪರೀಕ್ಷೆಗಳಲ್ಲಿ ಉಪಯೋಗಿಸಿದ ಆಲೆಯು ಈ ದೇಶದಲ್ಲೇ ಕಬ್ಬಿಣದಲ್ಲಿ ಮಾಡಿದ್ದು—ಅದಕ್ಕೆ ಮೂರು ಕಣಿಗಳಿದ್ದವು—ಅವು 9 ಅಂಗುಲ ಉದ್ದವೂ 6½ ಅಂಗುಲ ಅಡ್ಡಳತೆಯೂ ಉಳ್ಳವು—ಅವುಗಳು ನಟ್ಟುಗೆ ಜೋಡಿಸಿದ್ದವು—ನಾವು ಮಾಡಿದ ತೂಕ ಮುಂತಾದ ಪರೀಕ್ಷೆಗಳು ಬಹು ಜಾಗರೂಕತೆಯಿಂದ ತಪ್ಪು ಬಾರದಂತೆ ಮಾಡಿದ್ದಪಕ್ಷದಲ್ಲಿ ಮೇಲಕಂಡಪಟ್ಟಿಯ 4 ಮತ್ತು 6ನೆ ಕಲಂಗಳಲ್ಲಿ ಕೊಟ್ಟಿರುವ ಅಂಕಿಗಳು ಬಂದೇಯಾಗಿರಬೇಕು. ಆದರೆ ಬದ್ದೆಬಟ್ಟಯನ್ನು ಒಂದೇ ಪದರಲ್ಲಿ ಉದ್ದಕ್ಕೆ ಹರಡಿ ಗಾಳಿಗೆ ಒಡ್ಡಿದರ ಬಹುಬೇಗನೆ ತೇವವು ಆರಿಹೋಗುವ ಹಾಗೆ ಕಬ್ಬು ಗಾಣದಲ್ಲಿ ಹಾಯ ಸಿಪ್ಪೆಯಾಗಿ ಬಂದಾಗ ಅದರಲ್ಲಿ ಉಳಿದ ರಸವುಬೇಗನೆ ಆರಿಹೋಗುವುದು. ಸಿಪ್ಪೆಯನ್ನು ತೂಕಮಾಡುವದಕ್ಕೆ ಸ್ವಲ್ಪಕಾಲವಾಗುವದರಿಂದ ಅದರ ತೂಕವು ಆಲೆಯಿಂದ ಹೊರಟುಕೂಡಲೇ ಇರುವಷ್ಟು ಹೆಚ್ಚಾಗಿರುವದಿಲ್ಲಾ. ಈ ಕಡಮೆ ತೂಕದ ಆಧಾರದ ಮೇಲೆ ಲೆಖ್ಖಾಚಾರಮಾಡಿ 6ನೆ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶವು ಅಧಿಕವಾಗಿರುವುದು. ತೂಕಮಾಡೋವುದಕ್ಕೆ ಮುಂಚೆ ತೊಟ್ಟಗಳಲ್ಲಿಟ್ಟಿರುವ ಹಾಲು ಸಿಪ್ಪೆಯಲ್ಲಿರುವ ಹಾಲಿನಂತೆ ಬೇಗ ಹೆಚ್ಚಾಗಿಆರಿಹೋಗದೆ ಇದ್ದರೂ ಸ್ವಲ್ಪವುಟ್ಟಗಾದರೂ ಕಡಮೆಜೂಗುವುದು. ಆದುದರಿಂದ ಕಬ್ಬಿನ ತೂಕದ ಪೈಕಿ ಗಾಣದಿಂದ ಹಿಂಡಿದ ರಸದ ಅಂಕವನ್ನು ತೋರಿಸುವ ನೇ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶದ ಅಂಕಿಗಳೂ ಸರಿಯಾದವಲ್ಲ—ಅವುಗಳು ಸ್ವಲ್ಪ ಕಮ್ಮಿಯಾಗಿವೆ ನಿಜಸ್ಥಿತಿ ಏನಂದರೆ—ನಾಲ್ಕನೇ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶವೂ ಸರಿಯಲ್ಲ 6ನೆ ಕಲಂಮಿನಲ್ಲಿ ತೋರಿಸಿರ ಫಲಿತಾಂಶವು ಸರಿಯಲ್ಲ. ಇವರಡಕ್ಕೂ ಮಧ್ಯ 4ನೇ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಕ್ಕಿಂತ ಸ್ವಲ್ಪ ಹೆಚ್ಚಾಗಿಯೂ 6ನೆ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಕ್ಕಿಂತ ಬಹಳ ಕಡಿಮೆಯಾಗಿಯೂ ಇರುತ್ತೆ. ಹೀಗಿದ್ದರೂ 10ನೆ ಕಲಂಮಿನಲ್ಲಿ ನಮೂದಿಸಿರುವ ಫಲಿತಾಂಶವನ್ನು ಪಡಿಯಲು 6ನೆ ಕಲಂಮಿನಲ್ಲಿ ಕೊಟ್ಟಿರುವ ಫಲಿತಾಂಶವನ್ನೇ ಆಧಾರವಾಗಿಟ್ಟುಕೊಂಡು ಲೆಖ್ಖಾಚಾರಮಾಡಿದೆ—ಆದುದರಿಂದ 6ನೆ ಕಲಂಮಿನಲ್ಲಿ ನಮೂದಿಸಿರುವ ಫಲಿತಾಂಶಗಳು ಎಷ್ಟರಮಟ್ಟಿಗೆ ಹೆಚ್ಚಾಗಿರುವವೋ ಅದೇ ದರ್ಜಾದಲ್ಲ 10ನೆ ಕಲಂಮಿನಲ್ಲಿ ತೋರಿಸಿರುವ ಫಲಿತಾಂಶಗಳು ಕಡಿಮೆಯಾಗಿರುವುವು. ಆದುದರಿಂದ ಸಿಪ್ಪೆಯಲ್ಲಿ ನಿಜವಾಗಿಯೂ ನಿಲ್ಲುವಹಾಲು ಈ ಸಂಖೆಗಳಿಂದ ಕಂಡುಬರುವದಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತೆ. ಸಾಧಾರಣವಾಗಿ ರೈತರು ಆಲೆಯನ್ನು ಬಿಗಿಮಾಡುವುದಕ್ಕಿಂತ ಹೆಚ್ಚಾಗಿ ಆಲೆಯು ಬಿಗಿಪಡಿಸಿತ್ತು—ಸಿಪ್ಪೆಯು ಆಲೆಯಿಂದ ಹೊರಬಾಗ ಪ್ರಡಿಪುಡಿಯಾಗಿ ಬಂತು—ಆಲೆಯ ಬಳಿಯಿಂದ ತೂಕ ಮಾಡುವ ಸ್ಥಳಕ್ಕೆ ಪುಂಕರಿಗಳಲ್ಲ ಹೊತ್ತುಕೊಂಡು ಹೋಗಬೇಕಾಯಿತು—ಸಾಧಾರಣವಾಗಿ ಆಲೆಯಾಡುವಾಗ ಈ ಪರೀಕ್ಷೆಯಲ್ಲಿ ಕಂಡುಬಂದುದಕ್ಕಿಂತ ಹೆಚ್ಚಾಗಿಯೇ ಸಿಪ್ಪೆಯಲ್ಲಿ ಹಾಲು ಉಳಿದಿರುತ್ತದೆ. ಪೂರ್ವದ ಮರದ ಆಲೆಗಳಿಗಿಂತಲೂ ಈ ಕಬ್ಬಿಣದ ಆಲೆಗಳು ಎಷ್ಟೋ ಮೇಲಾಗಿದ್ದರೂ ಕಬ್ಬಿನಲ್ಲಿದ್ದ ರಸದಲ್ಲಿಕ್ಕೆ ನಾಲ್ಕರಲ್ಲಿ ಬಂದು ಪಾಲು ಅಥವಾ ಮೂರರಲ್ಲಿ ಬಂದು ಪಾಲು ಹಾಲು ನಷ್ಟವಾಗುತ್ತದೆ. ಇಷ್ಟು ಹೆಚ್ಚಾಗಿ ನಷ್ಟವಾಗುತ್ತದೆಂದು ನಾವು ಊಹಿಸಿರಲಿಲ್ಲ. ಕಬ್ಬಿನಲ್ಲಿರುವ ಹಾಲಿನ ಸೃಷ್ಟಿ ಕೇಕಡ 5ರಿಂದ 10ರವರಿಗೂ ಬಿಟ್ಟು ಮಿಕ್ಕ ಹಾಲನ್ನೆಲ್ಲವನ್ನೂ ತೆಗೆಯುವ ಮೇಲುತರದ ಆಲೆಗಳು ಮೈಸೂರು ಸೀಮೆಯಲ್ಲಿ ಉಪಯೋಗಕ್ಕೆ ಮುಂದೆ ಸ್ವಲ್ಪ ಕಾಲದವರೆವಿಗೂ ಅನುಕೂಲಿಸಲಾರವು—ಅವುಗಳು ಬಹಳ ದೊಡ್ಡವಾಗಿ ಬಹಳ ಬೆಲೆ ಬಾಳತಕ್ಕವುಗಳಾಗಿರುವದರಿಂದ ಹೆಚ್ಚಾಗಿ ಕಬ್ಬು ಬೆಳೆಯುವವರು ವಿನಾ ಸಾಧಾರಣ ಜನರು ಅವುಗಳನ್ನು ಇಟ್ಟುಕೊಳ್ಳಲಾರರು ಅವುಗಳಿಂದ ದಿವಸ ಬಂದಕ್ಕೆ 500 ರಿಂದ 1000 ಟ್ಟಗಳ ಕಬ್ಬನ್ನು ಆಡಬಹುದು. ಬಂದು ಸುಗ್ಗಿಯಲ್ಲಿ ಪ್ರಾವಬೆಳೆದ ಕಬ್ಬು 1000 ಎಕರೆಯಾದರೂ ಸುಲಭವಾಗಿ ಆಡಲಾಗುವದು. ಈಗ್ಗ ಮೈಸೂರು ಸೀಮೆಯಲ್ಲಿ ಬಹುನೂತನವಾದುದೆಂತಲೂ, ಬಹು ಮೇಲಾದುದೆಂತಲೂ ಅನ್ನಿಸಿಕೊಂಡಿರುವ ಕಬ್ಬಿಣದ ಗಾಣಗಳಿಗೂ ಮೇಲೆ ವಿವರಿಸಿದ ಅದ್ಭುತವಾದ ಆಲೆಗಳಿಗೂ ಮಧ್ಯಸ್ಥವಾದ ಅನೇಕ ದರ್ಜೆಗಳ ವಿವಿಧ ರಖಮುಗಳ ಆಲೆಗಳಿರುವವು. ಇತರ ದೇಶಗಳಲ್ಲಿ ಉಪಯೋಗದಲ್ಲಿರುವ ದೊಡ್ಡ ಆಲೆಗಳಿಗಿಂತ ಚಿಕ್ಕವಾಗಿ ಸುಲಭಕ್ರಯಬೆಳುವ ಆಲೆಗಳಿಂದ ಈಗ ಮೈಸೂರು ದೇಶದಲ್ಲಿ ಹೊಸನಮೂನೆ ಎಂದೆನಿಸಿಕೊಂಡಿರುವ ಆಲೆಯಿಂದ ತೆಗಿಯಬಹುದಾದ ಹಾಲಿಗಿಂತ ಹೆಚ್ಚಾಗಿ ಹಾಲನ್ನು ತೆಗಿಯಬಹುದು. ಮುಂದಿನ ವರುಷ ಎಣ್ಣೆಯಿಂದ ನಡೆಯುವ ಯಂತ್ರದಿಂದ ಶಿರಗುವ ಬಂದುವರೆ ಆಡಿ ಉದ್ದವೂ ಬಂದಡಿ ಅಡ್ಡಳತೆಯೂ ಇರುವ ಮೂರು ಕಣಿಗಳುಳ್ಳ ಆಲೆಯನ್ನು ಉಪಯೋಗಿಸಿ ಪರೀಕ್ಷೆ ಮಾಡಲು ಪ್ರಾಯಶಃ ಸಾಧ್ಯವಾದೀತು—ಆ ಆಲೆಯಲ್ಲಿ ಗಂಟೆಯೊಂದಕ್ಕೆ ಒಂದು ಟ್ಟ ಕಬ್ಬನ್ನಾಡಲಾಗುತ್ತದೆ. ಅದರಲ್ಲಿ ಕಣಿಗಳು ಅಡ್ಡಲಾಗಿ ಜೋಡಿಸಿವೆ. ಉರಗಪಳ್ಳಿ ಇನಾಂದಾರ್ ಪು" ರಾ" ಕೃಷ್ಣಪ್ಪ ಅಯ್ಯಂಗಾರ್ಯರಿಗಾಗಿ ಇಂತಹ ಒಂದು ಆಲೆಯನ್ನು ತರಿಸಲು ಏರ್ಪಾಡು ಮಾಡಿದೆ, ಅದುಬಂದ ತರುವಾಯ ಆದರಿಂದ ಪರೀಕ್ಷೆಗಳನ್ನು ಮಾಡಲಾಗುತ್ತ.

49. ಕಡದ ತರುವಾಯ ಕಬ್ಬು ಕೆಡೋಣ.—ಕಬ್ಬನ್ನು ಕಡದಮೇಲೆ ಒಂದೆರಡು ದಿವಸದವರಟ್ಟಿಗೆ ಆಲೆಯಾಡದೆ ಇದ್ದರೆ ಅದು ಕೆಡುವದಿಲ್ಲವೆಂದು ಕಬ್ಬು ಬೆಳೆಯುವ ದೇಶಗಳಲ್ಲಿ ಜನರು ಸಾಧಾರಣವಾಗಿ ತಿಳಿದುಕೊಂಡಿದ್ದಾರೆ. ಲೂಸಿಯಾನಾದಲ್ಲಿ ಕಬ್ಬನ್ನು ಕಡದಮೇಲೆ ಒಂದೆರಡು ತಿಂಗಳವರಿಗೂ ಬೀಜಕ್ಕೆ ಕಬ್ಬನ್ನು ಗುಣಿಗಳಲ್ಲಿ ಇಡುವ ಪದ್ಧತಿಯುಂಟು 50—60 ಮೈಲಿದೂರದಲ್ಲಿರುವ ದೊಡ್ಡ ಕಾರ್ಖಾನೆಗಳಿಗೆ ಆಲೆಯಾಡಲು ಕಬ್ಬನ್ನು ಕಳುಹಿಸುವದುಂಟು ಈ ಸಂದರ್ಭಗಳಲ್ಲಿ ಆಲೆಯಾಡುವದಕ್ಕೆ ಬಹಳಕಾಲ ಮುಂಚೆಯೇ ಕಬ್ಬನ್ನು ಕಡಿಯಬೇಕಾಗುತ್ತದೆ. ಹಿಂದೂದೇಶದಲ್ಲಿಯೂ ಅಲ್ಲಲ್ಲಿ ವಾಧ್ಯರಾಶ್ಯಗಳಲ್ಲಿ ದೊಡ್ಡ ಸಕ್ಕರೆ ಕಾರ್ಖಾನೆಗಳನ್ನು ಏರ್ಪಡಿಸುವ ವಿಷಯವನ್ನು ಆಲೋಚಿಸುವಾಗ ಕಬ್ಬನ್ನು ಕಡದತರವಾಯ ಅದನ್ನು ಕೆಡದಂತೆ ಎಷ್ಟುಕಾಲವಿಡಬಹುದು ಎಷ್ಟುದೂರ ಕಳುಹಿಸಬಹುದು ಎಂಬುವ ಮುಖ್ಯವಿಷಯವನ್ನು ಕಂಡುಹಿಡಿಯಬೇಕಾಗುತ್ತೆ. ಈ ವಿಷಯವನ್ನು ಪರೀಕ್ಷಿಸುವ ಉದ್ದಿಶ್ಯ ಬಂದೇತಾಕಿನಲ್ಲಿ ಬೆಳೆದಕಬ್ಬನ್ನು ಕಡಿದಮಟ್ಟಿಗೂ ಒಂದೇವಿಧವಾಗಿ 20 ಪಂಗಡವಾಗಿ ವಿಂಗಡಿಸಿತು. ಇವುಗಳನ್ನು ರಖಿಂವಾರ್ ವಿಂಗಡಿಸುವದಕ್ಕೆ ಸುಮಾರು 4-5 ಗಂಟೆಯ ಹೊತ್ತು ಹಿಡಿಯಿತು. ಆದುದರಿಂದ ಇವುಗಳ ಪೈಕಿ ಎರಡು ರಖಮುಗಳನ್ನು ಕಡದ ತರುವಾಯ ಕೂಡಿದಮಟ್ಟಿಗೂ ಜಾಗ್ರತೆಯಾಗಿಯೇ ವಿಗ್ರಹಮಾಡಿದ್ದಾಯಿತು. ಎಂದರೆ ಕಡಿದಮೇಲೆ ಬಹುಶಃ 4—5 ಗಂಟೆಗಳ ತರುವಾಯ ಮಾಡಿದ್ದಾಯಿತು. ಇತರ ರಖಮುಗಳನ್ನು ಎರಡುದಿವಸದ ತರುವಾಯವಿತು ಒಂದು ತಿಂಗಳವಳಗಾಗಿ ವಿಗ್ರಹಿಸಿದ್ದಾಯಿತು. ತೊಂಡೆಗಳಿದ್ದರೆ ಕಬ್ಬು ಕೆಡದಿರುವದಕ್ಕೆ ಅನುಕೂಲವೇನಾದರೂ ಉಂಟೇ ಎಂದು ಪರೀಕ್ಷಿಸುವುದಕ್ಕಾಗಿ ಕೆಲವು ರಖಮುಗಳ ತೊಂಡೆಯನ್ನು ಹೊಡೆದುಹಾಕದೆ ಇಟ್ಟಿದ್ದಾಯಿತು. ಈ ಕೆಳಗೆ ವಿಗ್ರಹಿಸಿದ್ದರ ಫಲಿತಾರ್ಥಗಳನ್ನು ಕಾರೀಖುವಾರು ಕೊಟ್ಟಿದೆ.

338—339ನೆ ನಂಬರುಗಳುಳ್ಳ ರಬ್ಬುಗಳು ಸಮಾನವಾದವುಗಳು ಆದರೂ ಅವುಗಳಲ್ಲಿ ಸೇರಿರುವ ವಸ್ತುಗಳ ಪ್ರಮಾಣವು ಒಂದಾಗಿಲ್ಲ. ಅವುಗಳಕೆಳಗಿನ ರಬ್ಬುಗಳ ವಿಷಯದಲ್ಲಿ ಸಮೂರಿಸಿರುವ ವಿಗ್ರಹದ ಫಲಿತಾರ್ಥಗಳನ್ನು ಪರ್ಯಾಲೋಚಿಸಿದರೆ 338ನೆ ನಂಬರಿನಲ್ಲಿ ಕಂಡುಬರುವ ವಸ್ತುಸಮ್ಮಿಶ್ರಣವನ್ನೇ ಅದೇ ಪ್ರಕಾರವಿನಲ್ಲಿ ಪರೀಕ್ಷಿಸಿದ ಇತರ ರಬ್ಬುಗಳ ವಸ್ತುಸಮ್ಮಿಶ್ರಣವನ್ನಾಗಿ ಸಾಮಾನ್ಯತ್ವೇನ ತೆಗೆದುಕೊಳ್ಳಬಹುದು. 339ನೆ ನಂಬರಿನಲ್ಲಿ ಕರ್ಕರ ಮತ್ತು ಗಟ್ಟಿಪದಾರ್ಥಗಳು ಇತರ ನಂಬರುಗಳಲ್ಲಿ ಸಾಮಾನ್ಯವಾಗಿರುವದಕ್ಕಿಂತ ಹೆಚ್ಚಾಗಿದೆ. ಆದರೆ ಈ ಪರೀಕ್ಷೆಗಳಲ್ಲಿ ಕರ್ಕರ ವಿದ್ರಾವ್ಯದ ವಿಷಯವನ್ನೇ ನಾವು ಮುಖ್ಯವಾಗಿ ಆಲೋಚಿಸಬೇಕಾದುದು. ಮೇಲೆಕಂಡ ಎರಡು ರಬ್ಬುಗಳಲ್ಲಿಯೂ ಶೇಕಡಾ 87ರಷ್ಟು ಈ ವಸ್ತುವಿದೆ. ಈ ರಬ್ಬು ಕಬ್ಬುಗಳನ್ನು ಕಡಿದಕೂಡಲೆ ಆಲೆಯಾಡಿಲ್ಲವಾದುದರಿಂದ ಅವುಗಳ ರಸವನ್ನು ಪರೀಕ್ಷಿಸುವುದಕ್ಕೆ ಮೊದಲು ಮಾಡುವುದರೊಳಗಾಗಿ ಅದರ ಸ್ವಭಾವವು ಬಹುಶಃ ಬದಲಾಯಿಸಿದ್ದೀತು—ಏಕೆಂದರೆ ಶೇಕಡ 87ರಷ್ಟು ಕರ್ಕರವಿದ್ರಾವ್ಯವು ಕಂಡುಬಂದದ್ದು ನಮ್ಮ ಅಂದಾಜನ್ನು ಮೀರಿದೆ. ಹಾಲುಕೆಡವೆ ಎಷ್ಟುಹೊತ್ತು ಇದ್ದೀತು ಎಂದು ಪರೀಕ್ಷಿಸಿದ್ದರಲ್ಲಿ ಕೆಲವು ಮುದರಿಗಳಲ್ಲಿ 9 ಗಂಟೆಗಳವರಿಗೂ ಏನೂವ್ಯತ್ಯಾಸ ಕಂಡುಬರಲಿಲ್ಲ. * ಪರೀಕ್ಷಿಸುವುದಕ್ಕೆ ಮುಂಚೆ ಈ ರಬ್ಬು ಕಬ್ಬುಗಳಲ್ಲಿ ಬಹಳ ವ್ಯತ್ಯಾಸ ಉಂಟಾಗಿದ್ದಂತೆ ತೋರುವುದಿಲ್ಲ. ವಿಶೇಷವೆಂದರೆ ಹಾಲು ತೆಗೆದಮೇಲೆ ಅದು ಕೆಡವೆ ಎಷ್ಟುಕಾಲ ಚನ್ನಾಗಿರುತ್ತದೋ ಅದಕ್ಕಿಂತ ಕಬ್ಬು ಕೆಡವೆ ಇರುವದೆಂಬುವದಕ್ಕೆ ಅಡ್ಡಿಇಲ್ಲವಷ್ಟೆ. ಆದರೆ ಕಡಿದ ಎರಡುದಿವಸದೊಳಗಾಗಿ ಕಬ್ಬಿನಲ್ಲಿ ಬಹಳ ವ್ಯತ್ಯಾಸಉಂಟಾಗುತ್ತದೆ. 3—4ನೆ ಕಲಮುಗಳಲ್ಲಿ ನಮೂದಿಸಿರುವ ಸಂಖ್ಯೆಗಳ ವ್ಯತ್ಯಾಸಗಳನ್ನು ನೋಡಿದರೆ ಕಬ್ಬಿನತೂಕವು ಸ್ವಲ್ಪವಷ್ಟಿಗೆ ಕಮ್ಮಿಯಾಗಿವೆ ಎಂದು ತಿಳಿಯಬರುತ್ತದೆ. ಕರ್ಕರವಿದ್ರಾವ್ಯದ ಶೇಕಡಾವೂ, ಕರ್ಕರದ ಶೇಕಡಾವೂ ವಿಶೇಷ ಹೆಚ್ಚಿದ ಹಾಗೆ ಕಾಣುತ್ತದೆ. ಕಬ್ಬುಬಾಡಿ ಅದರಲ್ಲಿನ ನೀರು ಸ್ವಲ್ಪವಷ್ಟಿಗೆ ಇವರಿಹೋಗದಿದ್ದರೆ, ಹೀಗೆ ಆಗುತ್ತಿರಲಿಲ್ಲ. ಕಬ್ಬು ಬಣಗಿದ್ದುದರಿಂದ ಉಂಟಾದ ವ್ಯತ್ಯಾಸಗಳನ್ನು ವಜಾಮಾಡಿ ನಿಜವಾಗಿಯೂ ಉಂಟಾದ ವ್ಯತ್ಯಾಸವನ್ನು ಮಾತ್ರ 8—9—10ನೆ ಕಲಮುಗಳ ಫಲಿತಾಂಶಗಳಲ್ಲಿ ಕಾಣಿಸಿರುತ್ತೆ. ಮೊದಲು ಎರಡುದಿವಸಗಳಲ್ಲಿ ಮಾತ್ರ ವ್ಯತ್ಯಾಸವು ಬಹಳವಾಗಿ ಕಂಡುಬಂದುದು ಆ ಮೇಲೆ ಯಾವ ಎರಡುದಿವಸಗಳಲ್ಲೂ ಇಷ್ಟು ಬದಲಾವಣೆಯು ತೋರಲಿಲ್ಲ. ಏಕೆ ಹೀಗೆ ಆಗಬೇಕೋ ಈಗ ತಿಳಿಯಲು ಸಾಧ್ಯವಾಗಿಲ್ಲ. ಕರ್ಕರವಿದ್ರಾವ್ಯವು ಶೇಕಡಾ 3ರಷ್ಟು ಹೆಚ್ಚಾಗಿದೆ. ಕರ್ಕರವೂ ಅದೇ ರೀತಿಯಲ್ಲಿ ಕವಿದ್ರವಾಗಿದೆ. ಇಲ್ಲದ ಬದಲು ನಾವು ಸಕ್ಕರೆಯನ್ನೇ ಮಾತುಮಾಡಿದರೆ ತಯಾರಾಗಬಹುದಾದ ಸಕ್ಕರೆಯು ಮೂರರಲ್ಲಿ ಒಂದು ಭಾಗವೇ ಈ ರೀತಿಯಲ್ಲಿ ನಷ್ಟವಾದ ಹಾಗೆ ಆಗುವದರಿಂದ ಇದು ವಿಶೇಷವಾದುದೇ ಸರಿ. ಆದರೆ ಈ ಫಲಿತಾರ್ಥಗಳಿಂದ ವಾಸ್ತವಸ್ಥಿತಿಯನ್ನು ನಾವು ತಿಳಿದುಕೊಳ್ಳಬೇಕಾದರೆ ಅನೇಕಾವೃತ್ತಿ ಈ ಪರೀಕ್ಷೆಗಳನ್ನು ನಡಿಸಿ ಈಗಿನ ಫಲಿತಾರ್ಥಗಳು ಸರಿಯಾದವೆಂದು ದೃಢಪಡಿಸಿಕೊಳ್ಳಬೇಕಾಗುತ್ತದೆ. ಕಬ್ಬನ್ನು ಕಡಿದಮೇಲೆ ಇಪ್ಪತ್ತುದಿವಸಗಳವರೆಗೂ ಕರ್ಕರವು ಕಡಿಮೆಯಾದಹಾಗೆಲ್ಲಾ ಕರ್ಕರ ವಿದ್ರಾವ್ಯವು ಹೆಚ್ಚಿ ಗಟ್ಟಿ ಪದಾರ್ಥದ ಪೊತ್ತವೇನೋ ಒಂದೇ ರೀತಿಯಲ್ಲಿತ್ತು. ಆ ಮೇಲೆ ಗಟ್ಟಿಪದಾರ್ಥದ ಪೊತ್ತವು ಕಡಿಮೆಯಾಗುವದಕ್ಕೆ ಪ್ರಾರಂಭವಾಯಿತು. ಇದರಿಂದ ಕರ್ಕರವು ಕರ್ಕರವಿದ್ರಾವ್ಯವಾಗುವ ಬಂದೇ ವ್ಯತ್ಯಾಸವಲ್ಲದೆ ಕಬ್ಬಿನಲ್ಲಿ ಇತರ ವಿಧವಾದ ಬದಲಾವಣೆಗಳು ನಡೆಯುತ್ತಿದೆಯೆಂದು ಅರ್ಥವಾಯಿತು. ಕಬ್ಬುಗಳ ತೊಡೆಮನ್ನು ಹಾಗೆಯೇ ಇಟ್ಟಿದ್ದರಿಂದ ವಿನೂ ವ್ಯತ್ಯಾಸ ಕಂಡುಬರಲಿಲ್ಲ. ಆದರೆ ಈ ವಿಷಯದಲ್ಲಿ ಈ ವರುಷ ಚನ್ನಾಗಿ ಪರೀಕ್ಷೆಮಾಡಲಿಲ್ಲ. ಈ ಪರೀಕ್ಷೆಗಳನ್ನು ನಡಿಸಿದ್ದರಿಂದ ಮುಖ್ಯವಾಗಿ ತಿಳಿಯಬಂದುದೇನಂದರೆ:—ಆಲೆಯಾಡುವದಕ್ಕೆ ಬಂದಿರಡು ದಿವಸಗಳ ಮುಂಚೆ ಕಬ್ಬನ್ನು ಕಡಿಯುವದರಿಂದ ಸಾಮಾನ್ಯವಾಗಿ ಜನಗಳು ತಿಳಿದಿರುವುದಕ್ಕಿಂತ ಹೆಚ್ಚಾಗಿ ನಷ್ಟವುಂಟಾಗುತ್ತದೆ—ಈ ಪರೀಕ್ಷೆಗಳನ್ನು ಕೂಡಿದಮಟ್ಟಿಗೂ ಬಾವಿಬಾರಿಗೂ ಮಾಡುತ್ತಿರಬೇಕು. ಮೊದಲು ನಾಲ್ಕೈದು ಸಲ ನಡೆಸುವ ವಿಗ್ರಹಕ್ರಿಯೆಗಳಿಗೆ ನಡುವೆ ಕಾಲವಿಳಿಬಿದ್ದ ಈ ಸಲಕ್ಕಿಂತಲೂ ಕಡಮೆಯಾಗಬೇಕು.

50. ಹಾಲನ್ನು ಕಾಯಿಸಲು ನಿಧಾನಮಾಡುವದರಿಂದುಂಟಾಗುವ ಕೇಡು:—ಹೋದ ಜನವರಿ ತಿಂಗಳಲ್ಲಿ ಸಾಮರ್ ಕೋಟಿನಲ್ಲಿರುವ ಸಕ್ಕರೆ ಕಾರ್ಖಾನೆಯನ್ನು ನೋಡಲು ಹೋಗಿದ್ದಾಗ ಬಂದು ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಅಲ್ಲಿನವರು ಅಪೇಕ್ಷಿಸಿದರು ಕಾರ್ಖಾನೆಗೆ ಬಹುದೂರದಿಂದ ಜಸ್ತಾಗಿ ಕುದ್ರಿ * ಮಾಡಿದ ಕಬ್ಬಿಣದ ಪೀಪಾಯಿಗಳಲ್ಲಿ ಸರಿಯಾಗಿ ಸುಣ್ಣ ಬೆರಸಿದ ರಸವನ್ನು ಸಾಗಿಸಲು ಪ್ರಯತ್ನಮಾಡಿದರೆ ರಸವು ಕೆಟ್ಟು ವಿನೂ ನಷ್ಟವಾಗಲಾರದೋ ಎಂದು ಪ್ರಶ್ನೆಮಾಡಿದರು—ಇದು ಸಕಲರಿಗೂ ಉಪಯೋಗವಾದ ವಿಷಯವಾದುದರಿಂದ ಇದನ್ನುದ್ದೇಶಿಸಿ ಕೆಲವು ಪರೀಕ್ಷೆಗಳನ್ನು ನಡೆಸಿವ್ಯಾಯಿತು. ಹುಳಿಯಾಗದೆ ಕೂಡಿದವು ಟ್ಟಿಗೂ ಜೇಕೆಯಿಂದ ತೆಗೆದ ಹಾಲನ್ನು ವಿಗ್ರಹಮಾಡಿದ ತರುವಾಯ ನಿರ್ಮಲವಾದ ರಾಜಿನಪಾತ್ರೆಗಳಲ್ಲಿ ಸಮಭಾಗವಾಗಿ ಇಟ್ಟು ಬಂದಕ್ಕೆ ಮಾತ್ರ 34ನೆ ಪ್ರಕರಣದಲ್ಲಿ ವಿವರಿಸಿದಂತೆ ಸುಣ್ಣ ಕೊಟ್ಟು ಮತ್ತೊಂದನ್ನು ಹಾಗೆಯೇ ಇಟ್ಟದ್ದು ಇವೆರಡನ್ನೂ ಬಂದು ಕ್ಲಿಪ್ತಕಾಲವಾದ ಕೂಡಲೆ ಪುನಃ ವಿಗ್ರಹಿಸಿತು. ಅವರ ಫಲಿತಾರ್ಥಗಳನ್ನು ಈ ಕೆಳಗಿನ ತಕ್ತೆಯಲ್ಲಿ ಕೊಟ್ಟಿದೆ.

7ನೆ ನಂಬರ್ ತಕ್ತೆ.

ಕಬ್ಬಿನ ಹಾಲನ್ನು ಕಾಯಿಸದೆ ಇಟ್ಟರಲು ಅವರಲ್ಲಿ ಕರ್ಕರವಿದ್ರಾವ್ಯವೂ ಶೇಕಡಾ ಹೆಚ್ಚುವದರಿಂದ ಹುಳಿ ಹಿಡಿದ ಪ್ರಮಾಣವನ್ನು ತೋರಿಸುವ ತಕ್ತೆ.

* ಹುಳಿ ಮುಂತಾದ್ದು ಬೀಳದಹಾಗೆ ರಸವರ್ಗಗಳನ್ನು ಉಪಯೋಗಿಸುವಾಗಲಿ, ಕಾಸುವಾಗಲಿ ಕುದ್ರಿ ಮಾಡುವುದು.

| ಹಾಲಿನ ಜಂಡರ್ ನಂಬರ್ | ಸುಣ್ಣ ಬೆರೆಸಿದ್ದು ; ಬೆರಸದೆ ಇದ್ದುದ್ದು | ಎಷ್ಟು ಘಂಟೆಗಳಿಟ್ಟು ತರುವಾಯ ವಿಗ್ರಹಿಸಿದ್ದು. | ಕರ್ಕರ ವಿದ್ಯಾವ್ಯದ ಶೇಕಡಾ. | ವಿಗ್ರಹಿಸಿದ ತಾರೀಖು. |
|---|---|---|---|---|
| 318 | ಸುಣ್ಣ ಹಾಕದ್ದು .... | ಹೊಸದು | ·67 | 18—4—05. |
| | ಡಿಟೋ | 7 | ·82 | ಡಿಟೋ |
| | ಸುಣ್ಣ ಹಾಕಿದ್ದು ... ... | 7 | ·75 | ಡಿಟೋ |
| 324 | ಸುಣ್ಣ ಹಾಕದ್ದು ... ... | ಹೊಸದು | ·80 | ಡಿಟೋ |
| | ಡಿಟೋ ... ... | 6 | ·91 | ಡಿಟೋ |
| | ಡಿಟೋ ... ... | 20 | 2·9 | 19—4—05 |
| | ಸುಣ್ಣ ಹಾಕಿದ್ದು .... ... | 6 | ·83 | 18—4—0 |
| | ಡಿಟೋ | 20 | 6·2 | 19—4—0 |
| 332 | ಸುಣ್ಣ ಹಾಕದ್ದು ... ... | ಹೊಸದು | ·73 | 20—4—0 |
| | ಡಿಟೋ ... .. | 6 | 1·10 | ಡಿಟೋ |
| | ಸುಣ್ಣ ಹಾಕಿದ್ದು .... ... | 6 | ·74 | ಡಿಟೋ |
| 458 | ಸುಣ್ಣ ಹಾಕದ್ದು ... ... | ಹೊಸದು | ·61 | 26—4—05 |
| | ಡಿಟೋ .. .. | 14 | 2·04 | 27—4—05 |
| | ಡಿಟೋ | 19 | 3·03 | ಡಿಟೋ |
| | ಆವ್ಯ ಸರ್ಜಿಕಗಳಿಗೆ ಔದಾಸೀನ್ಯವನ್ನು ಹೊಂದು ವವರಿವಿಗೂ ಸುಣ್ಣ ಹಾಕಿದ್ದು. | 14 | 1·93 | ಡಿಟೋ |
| | ಡಿಟೋ .. | 19 | 3·50 | ಡಿಟೋ |
| | ಹೆಚ್ಚು ಸುಣ್ಣ ಹಾಕಿದ್ದು .. | 14 | ·99 | ಡಿಟೋ |
| | ಡಿಟೋ .. | 19 | 3·00 | ಡಿಟೋ |

51. ಈ ಫಲಿತಾರ್ಥಗಳೆಲ್ಲವನ್ನೂ ಯೋಚಿಸಿದ್ದರಲ್ಲಿ ಸುಣ್ಣ ಬೆರೆಸದ ಮಾದರಿಗಳಿಗಿಂತ ಸುಣ್ಣ ಬೆರೆಸಿದ ಮಾದರಿಗಳು ಸ್ವಲ್ಪ ಹೆಚ್ಚು ಕಾಲ ಕೆಡದೆ ಇರುವಂತೆ ತೋರುತ್ತದೆ. ಆದರೆ ಇದರಲ್ಲಿ ನಮಗೆ ಭರವಸೆ ಸಾಲದ್ದರಿಂದ, ಇದನ್ನು ನಂಬಿಕೊಂಡು ಹಾಲು ಹುಳಿಯಾಗದಿರಲೆಂದು ಯಾರೂ ಈ ರೀತಿಯಮಾಡಲು ಯತ್ನಿಸಕೂಡದು. ಇದೇ ವಿಷಯದಲ್ಲಿ ಇನ್ನೂ ನಡೆಸಿದ ಪರೀಕ್ಷೆಗಳ ಫಲಿತಾರ್ಥವನ್ನು ಈ ಕೆಳಗಿನ ತಖ್ತೆಯಲ್ಲಿ ಕೊಟ್ಟಿದೆ.

8ನೆ ನಂಬರ್ ತಖ್ತೆ.

| ಹಾಲಿನ ಜಂಡರ್ ನಂಬರ್ | ಸುಣ್ಣ ಬೆರೆಸಿದ್ದು ಬೆರಸದೆ ಇದ್ದುದ್ದು | ಕರ್ಕರ ಹೊಸ ರಸದಲ್ಲಿದ್ದ ವಿದ್ಯಾವ್ಯ | ಎಷ್ಟು ಗಂಟೆ ತರುವಾಯ ವಿಗ್ರಹಿಸಿದ್ದು. | | | | | | ತಾರೀಖು. |
|---|---|---|---|---|---|---|---|---|---|
| | | | 3 ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | 6 ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | 9 ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | 13¼ ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | 17¼ ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | 19¾ ಗಂಟೆ ಕರ್ಕರ ವಿದ್ಯಾವ್ಯದ ಶೇಕಡಾ. | |
| 452 | ಸುಣ್ಣ ಹಾಕದ್ದು | ·54 | ·56 | ·61 | ·61 | .. | ... | .. | 26—4—05 |
| 453 | ಆವ್ಯ ಸರ್ಜಿಕಗಳಿಗೆ ಔದಾಸೀನ್ಯವನ್ನು ಹೊಂದುವವರಿವಿಗೂ ಸುಣ್ಣ ಹಾಕಿದ್ದು. | ·54 | ·54 | ·58 | ·61 | ... | .... | .. | ಡಿಟೋ |
| 454 | ಹೆಚ್ಚು ಸುಣ್ಣ ಹಾಕಿದ್ದು | ·54 | ·51 | ·56 | ·61 | .. | ... | .. | ಡಿಟೋ |
| 455 | ಸುಣ್ಣ ಹಾಕದ್ದು ... | ·37 | ... | ... | .. | ·42 | ·62 | 1·00 | 8—5—05<br>9—5—05 |
| 456 | ಆವ್ಯ ಸರ್ಜಿಕಗಳಿಗೆ ಔದಾಸೀನ್ಯವನ್ನು ಹೊಂದುವವರಿವಿಗೂ ಸುಣ್ಣ ಹಾಕಿದ್ದು. | ·37 | ... | ... | ... | ·40 | ·57 | ·80 | ಡಿಟೋ |
| 457 | ಹೆಚ್ಚು ಸುಣ್ಣ ಹಾಕಿದ್ದು | ·37 | ... | .. | .. | ·37 | ·44 | ·61 | ಡಿಟೋ |

ಪೂರಾ ಒಂದು ದಿವಸದೊಳಗಾಗಿ ರಸದಲ್ಲಿ ಏನೇನು ವ್ಯತ್ಯಾಸ ಕಂಡುಬರುತ್ತದೊ ಅದನ್ನು ಜೋಕೆಯಿಂದ ನೋಡಿ ತಿಳಿದು ಕೊಳ್ಳುವ ಉದ್ದೇಶದಿಂದಲೇ ಈ ಪರೀಕ್ಷೆಗಳನ್ನು ಮಾಡಿದ್ದಾಯಿತು. ಸುಣ್ಣಕೊಟ್ಟ ಮತ್ತು ಸುಣ್ಣಕೊಡದ ಮಾದ್ರಿಗಳ ಜೊತೆಗೆ ಮತ್ತೊಂದನ್ನು ಸೇರಿಸಿದ್ದಾಯಿತು. ಇದಕ್ಕೆ ಸಾಧಾರಣವಾಗಿ ಸುಣ್ಣ ಕೊಟ್ಟ ರಸವುಗಿಂತ ಎರಡರಷ್ಟು ಹೆಚ್ಚಾಗಿ ಸುಣ್ಣ ಕೊಟ್ಟಿತು. ಇದನ್ನೇ "ಅತಿಯಾಗಿ ಸುಣ್ಣ ಕೊಟ್ಟಿದ್ದೆಂದು" ನಮೂದಿಸಿದೆ. ಈ ಮೂರು ಮಾದ್ರಿಗಳ ಪೊಡಲೋಳೆಯನ್ನು ಬೆಳಿಗ್ಗೆ ಆಲೆಯಾಡಿ ಮೂರು ಮೂರು ಗಂಟೆಗೊಂದಾವರ್ತಿ ವಿಗ್ರಹಿಸಿತು. 455, 456, 457ನೆ ನಂಬರುಗಳುಳ್ಳ ಮೊದಲೋಳೆಯನ್ನು ಸಾಯಂಕಾಲ ಆಲೆಯಾಡಿ ಆಗಲೆ ವಿಗ್ರಹಿಸಿ ರಾತ್ರೆಯೆಲ್ಲಾ ಇಟ್ಟದ್ದು ಮಾರನೇದಿನ 13¼ ಗಂಟೆಯಾದಮೇಲೊಂದಾವರ್ತಿ 17¼ ಗಂಟೆಯಾದಮೇಲೊಂದಾವರ್ತಿ 19¾ ಗಂಟೆಯಾದಮೇಲೊಂದಾವರ್ತಿ ಹೀಗೆ ಮೂರುಸಲ ವಿಗ್ರಹಿಸಿದ್ದಾಯಿತು.

ಈ ಪರೀಕ್ಷೆಯ ಉತ್ಕೃರ್ಷವೇನೆಂದರೆ ಅತಿಯಾಗಿ ಸುಣ್ಣ ಬೆರಸುವ ವ್ಯಾಪಾರಿಗಳು ಇತರ ವ್ಯಾಪಾರಿಗಳಿಗಿಂತ ಕೆಡೆದೆ ಇರುತ್ತಾರೆ. ಆದರೆ ಯಾವ ರೀತಿಯಾದರೂ 20 ಗಂಟೆಯವರಿಗಾಗಲಿ ಹುಳಿ ಹಿಡಿಯದೆ ಇರಲಿಲ್ಲ. ಸಾಮಾನ್ಯವಾಗಿ ಆಜರಣೆಯಲ್ಲಿ ಇಷ್ಟು ತೃಪ್ತಿಕರವಾಗಿರುವುದು ಸಂದೇಹ. ಆದರೆ ಇದೇವಿಷಯದಲ್ಲಿ ಮುಂದೆಯೂ ಪರೀಕ್ಷೆಗಳನ್ನು ನಡೆಸಿದರೆ ಉದ್ದೇಶವು ಕೈಗೂಡುವುದೆಂದು ಇದರಿಂದ ಧೈರ್ಯ ಹುಟ್ಟುತ್ತದೆ.

52. ಸಾರಾಂಶ.—ಈ ವರ್ಷ ಮಾಡಿದ ಕಬ್ಬಿನ ಪರೀಕ್ಷೆಯಿಂದಲೂ ಅದರಿಂದ ಪದಾರ್ಥಗಳನ್ನು ತಯಾರುಮಾಡುವ ವಿಷಯದಲ್ಲಿ ನಡೆಸಿದ ಪರೀಕ್ಷೆಯಿಂದಲೂ ತಿಳಿಯಬರುವದೇನಂದರೆ :—ಕಬ್ಬುನ್ನಾಗಲೀ ಅದರ ರಸವನ್ನಾಗಲಿ ಬಹಳಕಾಲ ಪ್ರಯಾಣ ಹಿಡಿಯುವ ದೂರ ದೇಶಗಳಿಗೆ ಕಳುಹಿಸುವದು ನಷ್ಟಕರವಾದದ್ದು. ಕಬ್ಬಿನ ಚರಕಿ ಸಕ್ಕರೆಯನ್ನು ಮಾಡಲು ಪರೀಕ್ಷಿಸಿದ್ದರಲ್ಲಿ ಕಂಡುಬರುವದೇನಂದರೆ :—ಇದನ್ನು ತಯಾರ್ಮಾಡಲು ಏರ್ಪಡಿಸುವ ಕಾರ್ಖಾನೆಗಳು ಚಿಕ್ಕವಾದಾಗ್ಯೂ ಈ ದೇಶದ ಸಕ್ಕರೆಯ ವ್ಯಾಪಾರಕ್ಕೆ ಅವುಗಳಿಂದ ಮೇಲುಂಟಾಗುವುದೆಂದು ತೋರುತ್ತೆ.

53. ಹಾಲಿಗೆ ಹೆಚ್ಚಾಗಿ ಸುಣ್ಣ ಹಾಕಿದರೆ ಬೆಲ್ಲ ಕಪ್ಪಾಗುತ್ತದೆಂಬ ಜನರ ಅಭಿಪ್ರಾಯದ ವಿಷಯದಲ್ಲಿ ಈ ಪರೀಕ್ಷೆಗಳಿಂದ ತಿಳಿಯಬರುವದೇನೆಂದರೆ :—ಹಾಲಿಗೆ ಸುಣ್ಣ ಸೇರಿಸದಹಾಗೆಲ್ಲಾ ಪೂರಾ ಸುಣ್ಣ ಸೇರುವವರಿಗೂ ಬೆಲ್ಲ ಕಪ್ಪಾಗುವದು ಅರ್ಥ ಸುಣ್ಣ ಕೊಟ್ಟರೆ ಹಾಲಿನಿಂದ ತಯಾರಾದ ಬೆಲ್ಲಕ್ಕಿಂತ ಪೂರಾ ಸುಣ್ಣಕೊಟ್ಟ ಹಾಲಿನಿಂದ ಮಾಡಿದ ಬೆಲ್ಲವು ಬಳುಪಾಗುತ್ತದೆ. ಹೋದವರ್ಷ ಈ ವಿಷಯದಲ್ಲಿ ತಿಳಿಸಿದ ವಿಷಯಗಳನ್ನು ಈಸಲವೂ ತಿಳಿಸಿದ್ದಲ್ಲಿ ಒಳ್ಳೇದೆಂದು ಈ ಕೆಳಗೆ ಅವುಗಳನ್ನ ನಮೂದಿಸಿದೆ.

ಬೆಲ್ಲ ಬೇಯಿಸುವಾಗ ಬಹು ಜಾಗರೂಕವಾಗಿರಬೇಕಾದ ವಿಷಯಗಳು.

(1) ಲಿಟ್ಮಸ್ ಬಣ್ಣ ಹಚ್ಚಿದ ಕಾಗದವನ್ನು ಉಪಯೋಗಿಸಿ ಆದರಿಂದ ಆಮ್ಲಕ್ಷಾರಗಳ ವಿಷಯದಲ್ಲಿ ರಸವು ಔದಾಸೀನ್ಯವನ್ನು ಹೊಂದಿದೆ ಎಂದು ತಿಳಿಯಬರುವವರಿಗೂ ಸುಣ್ಣ ಸೇರಿಸಬೇಕು.

(2) ಯಾವ ಕೆಲಸಕ್ಕೂ ಮಣ್ಣಿನ ಪಾತ್ರಗಳನ್ನು ಬಳಸಕೂಡದು.

(3) ಆಲೆಯನ್ನೂ ಎಲ್ಲಾ ಲೋಹದ ಪಾತ್ರೆಗಳನ್ನೂ ಕೆಲಸ ಮುಗಿದಮೇಲೆ ಪ್ರತಿದಿನವೂ ಬಿಂದಾವೃತ್ತಿಯಾದರೂ ತೊಳೆಯಬೇಕು.

(4) ಆಲೆಯಾಡಿದಮೇಲೆ ಕೂಡಿದಮಟ್ಟಿಗೂ ಜಾಗ್ರತೆಯಾಗಿ ಸಾಲನ್ನು ಬೇಯಿಸಬೇಕು.

(5) ಆಲೆಯ ಕಣಗಳು ಕೂಡಿದಮಟ್ಟಿಗೂ ಬಿಂಡಕ್ಕೆ ಕಂದು ಸೇರುವಂತೆ ಕಿಟ್ಟಿಸಿದೆಯೇ ಎಂದು ನೋಡತಕ್ಕದ್ದು.

(6) ಕಬ್ಬನ್ನು ಕಡಿದಮೇಲೆ ಕೂಡಿದಮಟ್ಟಿಗೂ ಬೇಗ ಆಲೆಯಾಡಬೇಕು.

## ಕಾಫಿ.

54. ವಿಗ್ರಹ.—ನಾಲ್ಕನೆ ವರ್ಷದ ಬಿನ್ನವತ್ತಲೆಯ 10ನೆ ಪುಟದಲ್ಲಿ 6 ವಿಧ ಕಾಪಿಯನ್ನು ವಿಗ್ರಹಿಸಿದ ಫಲಿತಾರ್ಥಗಳನ್ನು ಕೊಟ್ಟಿರುತ್ತೆ. ಕಾಪಿಯ ವಿಶಿಷ್ಟ ಗುರುತ್ವವು ಅದರಲ್ಲಿರುವ ಸಾರಜನಕ, ರಂಜಕದ ಉಪ್ಪು, ಮರದುಉಪ್ಪು ಈ ಪದಾರ್ಥಗಳು ಕಡಮೆಯಾದಹಾಗೆಲ್ಲಾ ಕಾಪಿಯ ಬೆಲೆಯೂ ತಗ್ಗಿಸಂದು ಅದರಿಂದ ತಿಳಿಯಬರುತ್ತದೆ. ಹನ್ನೊಂದನೆ ಪುಟದಲ್ಲಿ ಪರೀಕ್ಷಾ ಫಲಿತಾರ್ಥಗಳನ್ನ ನೋಡಿದರೆ ತೃಪ್ತಿಕರವಾಗಿದೆಯಾದರೂ ವಸ್ತುವಿಗ್ರಹ ಪರೀಕ್ಷೆಯನ್ನ ಅನೇಕಾವರ್ತಿ ಮಾಡಲಿಲ್ಲವಾದುದರಿಂದ ಅವುಗಳಿಂದ ಏನೂ ಗೊತ್ತಾಗಿ ತೀರ್ಮಾನಿಸುವುದಕ್ಕೆ ಆಗುವದಿಲ್ಲವೆಂದು ಹೇಳಿದೆ. ಐದನೇ ವರುಷದ ಬಿನ್ನವತ್ತಲೆಯ 1ನೆ ಪುಟದಿಂದ 24ನೆ ಪುಟದವರೆಗೆ ಅದೇ ವಿಷಯದಲ್ಲಿ ಪರೀಕ್ಷಾ ಕೆಲಸವನ್ನು ನಡೆಸಿದ ಸಂಗತಿಯನ್ನು ವಿವರಿಸಿದೆ. ದಕ್ಷಿಣ ಹಿಂದೂ ದೇಶದ ಸಸ್ಯ ವಾಟಿಕೇಶ್ವರರ ಸಂಘದವರು (United Planters' Assosiation of Southern India) ಬಹಳ ವ್ಯತ್ಯಾಸವುಳ್ಳ 51 ರಖಮುಗಳನ್ನು ಕೂಡಿಟ್ಟಿದ್ದರು. ಅವುಗಳ ವಿಶಿಷ್ಟ ಗುರುತ್ವವನ್ನು ಪರೀಕ್ಷಿಸಿದ್ದಾಯಿತು. ಈ ಪರೀಕ್ಷೆಯ ಫಲಿತಾಂಶಗಳೂ ಹೋದವರ್ಷದ ಪರೀಕ್ಷೆಗಳೂ ಒಂದಾಗಿದೆ. ಮಿಕ್ಕ ಸಂಗತಿಗಳನ್ನು ಪರೀಕ್ಷಿಸಿದ್ದರಲ್ಲಿ ಕಾಪಿಯಲ್ಲಿರುವ ಸಾರಜನಕವೇ ಮೊದಲಾದ ಪದಾರ್ಥಗಳಿಗೂ ಲಂಡ್ಕ ಪಟ್ಟಣದಲ್ಲಿ ಮಾರಿದಾಗ ಅವುಗಳಿಂದ ಬೆರೆಯುವ ಖರೀದಿಗೂ ಏನೂ ಸಂಬಂಧವಿರುವಂತೆ ತೋರಲಿಲ್ಲ. ಆದುದರಿಂದ ನಾಲ್ಕನೆ ವರ್ಷದ ಬಿನ್ನವತ್ತಲೆಯಲ್ಲಿ ಬರದಿರುವದಾಗಿ ಮೇಲೆ ಹೇಳಿದ ಸಂಗತಿಯು ಸರಿಯಾದುದೇ ಹೌದು. ಕಾಪಿಯನ್ನು ವಿಗ್ರಹಿಸುವದು ಇನ್ನೂ ಪೂರ್ತಿಯಾಗಿಲ್ಲ. ಕಾಲಾನುಕೂಲವಿದ್ದರೆ ಕಾಪಿಯಲ್ಲಿರುವ ಕೆಲವು ಸಾವಯವ ಪದಾರ್ಥಗಳನ್ನು ನಿರ್ಣಯಿಸತಕ್ಕದ್ದಿದೆ. ಈ ವಿಷಯದಲ್ಲಿ ಇದುವರೆಗೂ ನಡೆಸಿರುವ ವಿಗ್ರಹ ಫಲಿತಾರ್ಥಗಳು ಕಾಪಿಯ ಗುಣವನ್ನು ಗೊತ್ತುಮಾಡಲು ಈಗಲೇ ಕೆಲಸಕ್ಕೆ ಬಾರವಾಗಿರುವದರಿಂದ ಈ ವಿಷಯದಲ್ಲಿ ಇನ್ನೂ ಪರೀಕ್ಷೆಗಳು ನಡದು ಹೇರಳವಾಗಿ ಸಂಗತಿಯು ಗೊತ್ತಾಗುವವರೆಗೂ ಫಲಿತಾರ್ಥಗಳಿಲ್ಲವನ್ನೂ ವಿಶದಪಡಿಸಲಾಗುವದಿಲ್ಲ.—ಕಾಪಿಯು ಹಸನು ಕಿರಿದು ಎಂಬುವದು ಕಾಪಿಯಲ್ಲಿರುವ ಸಾರಜನಕ, ರಂಜಕದ ಉಪ್ಪು, ಮರದುಪ್ಪು, ಇವುಗಳ ಪ್ರಮಾಣದಿಂದೇನೂ ಗೊತ್ತಾಗುವದಿಲ್ಲ.

55. ಗೊಬ್ಬರದ ಪರೀಕ್ಷೆ.—ನಾಲ್ಕನೆ ವರ್ಷದ ಬಿನ್ನವತ್ತಲೆಯ 6ರಿಂದ 11ನೆ ಪುಟದ ನಂಬಿಗೆ ಕಾಫಿ ಗಿಡಗಳ ತಾಕುಗಳಿಗೆ ವಿಧವಿಧ ಗೊಬ್ಬರಗಳನ್ನು ಕೊಟ್ಟು ಪರೀಕ್ಷೆ ಮಾಡಿದ್ದರ ಫಲಿತಾರ್ಥಗಳನ್ನು ಕೊಟ್ಟಿದೆ. 1—2ನೆ ನಂಬರು ತಾಕುಗಳಲ್ಲಿ ಅದೇ ಪರೀಕ್ಷೆಗಳನ್ನೇ ಇನ್ನೂ 2 ವರ್ಷಕಾಲ ಮಾಡಿದ್ದಾಯಿತು. ಈ ಪರೀಕ್ಷೆಗಳನ್ನು ಎಷ್ಟು ವರ್ಷಗಳಕಾಲ ಮಾಡಿದ್ದಾಯಿತೊ ಆ ವರ್ಷಗಳ ಫಲಿತಾರ್ಥಗಳ ಸರಾಸರಿಯನ್ನು ನೋಡುವಲ್ಲಿ ಎರಡು ತಾಕುಗಳಲ್ಲಿಯೂ ಗೊಬ್ಬರವಿಡದ ಪಾತಿಗಳೇ ಮುಂದಾಗಿ ಕಂಡುಬಂದವು. ಮೇಲೆ ಕಂಡ ಪರೀಕ್ಷೆಗಳನ್ನು ಬಹು ಚೋಕೆಯಿಂದ ಮಾಡಿದ ಮೆ॥ ಡೆ, ಮೆ॥ ಹಾರಿಸ್ ಸಾಹೇಬರುಗಳು ಅವುಗಳನ್ನೂ ವರ್ಷವರ್ಷವೂ ನಡೆಸುವುದಾಗಿ ಒಪ್ಪಿಕ್ಕೊಂಡಿರುತ್ತಾರೆ. 1903ನೆ ವರ್ಷದವರೆಗೆ ನಡೆದ ಕೆಲಸಗಳನ್ನು ಎಂದರೆ ಪಾತಿಗಳನ್ನು ವಿಂಗಡಿಸಿದ್ದು ಅವುಗಳಿಗೆ ವಿಧವಿಧವಾದ ಗೊಬ್ಬರಗಳನ್ನು ಉಪಯೋಗಿಸಿದ್ದು ಇವೆ ಮೊದಲಾದವುಗಳ ಫಲಿತಾರ್ಥಗಳನ್ನು ಮೇಲೆ ನಮೂದಿಸಿದ ಬಿನ್ನವತ್ತಲೆಯಲ್ಲಿ ಕೊಟ್ಟಿರುತ್ತೆ. 1903ನೆ ವರ್ಷದಿಂದ ಈಚೆಗೆ ನಡೆದ ಪರೀಕ್ಷೆಗಳ ಫಲಿತಾರ್ಥಗಳು ಹಿಂದೆ ಕಂಡುಬಂದವುಗಳಂತೆಯೇ ಇರುವುದರಿಂದ ಅವುಗಳನ್ನು ಪುನಃ ಇಲ್ಲಿ ಕೊಡತಕ್ಕ ಅವಶ್ಯಕವಿಲ್ಲ. ಮುಂದೆ

ಯಾವಾಗಲಾದರೂ ಅವುಗಳನ್ನು ತಿಳಿಸಲಾಗುತ್ತದೆ. ಆದರೆ ಇಂದಿನಿಂದ ಮುಖ್ಯವಾಗಿ ತಿಳಿದುಬರುವುದೇನೆಂದರೆ—ಈ ಪ್ರಾತಿಗಳಿಗೆ ಕೊಟ್ಟ ಗೊಬ್ಬರಗಳು ಕಡ್ಡಾಯವಾಗಿ ಉಪಯೋಗವಾಗಿಲ್ಲ. ಈ ವಿಷಯ ಸಂದರ್ಭದಲ್ಲಿಯೂ ಗೊಬ್ಬರ ಕೊಡದ ತಾಕಿನಲ್ಲಿಯೂ ಬಹಳ ಮೇಲಾಧ ಫಲವುಂಟಾಯಿತು ಆಕಸ್ಮಿಕವಾದುದು. ಮೈ॥ ಹೂರಿನರವರ ತಾಕುಗಳ ಪೈಕಿ ಎಷ್ಟಕ್ಕೆ ಗೊಬ್ಬರ ಕೊಟ್ಟಲಿಲ್ಲ. ಅವು ಗಳಲ್ಲಿ ನೆ ತಾಕಿನ ಫಲವು ಶುದ್ಧಾಂಗ ಕೊಪ್ಪದ್ದಾಯಿತು. ಆದರೆ ಈ ಪರೀಕ್ಷೆಗಳಲ್ಲೆಲ್ಲಾ ಗೊಬ್ಬರ ಕೊಡದ ತಾಕುಗಳೇ ಮುದ ಲಾದುದು ಒಳ್ಳೇದೇ ಆಯಿತು.

56. ಎರಡೇ ಪರೀಕ್ಷಾ ವಾಟಿಕೆಗಳಿಂದ ಅವುಗಳನ್ನು 5 ವರ್ಷಕಾಲ ಪರೀಕ್ಷೆಗಳನ್ನು ನಡೆಸಿದರೂ ಅವುಗಳ ಫಲಿತಾರ್ಥವು ಇಂಥಾದ್ದೇ ಎಂದು ಖಂಡಿತವಾಗಿ ಗೊತ್ತು ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ಕಾಫಿ ಗಿಡಗಳಿಗೆ ಹಿಂದೆ ಅತಿ ಜಾಸ್ತಿ ಗೊಬ್ಬರ ಕೊಟ್ಟಿತೆಂದು ಈ ಪರೀಕ್ಷೆಯಿಂದಲೇ ತೀರ್ಮಾನಿಸುವುದಕ್ಕೆ ಆಗುವುದಿಲ್ಲ. ಮತ್ತು ಈ ತಾಕುಗಳಿಗೆ 5 ವರ್ಷಕಾಲ ಗೊ ಬ್ಬರವೇ ಕೊಡದಿದ್ದ ಪಕ್ಷಕ್ಕೆ ಅತಿ ಹೆಚ್ಚಾಗಿ ಕೊಟ್ಟಲ್ಲಿ ಎಷ್ಟು ಬೆಳೆಯುತ್ತಿತ್ತೋ ಅಷ್ಟೇ ಬೆಳೆಯುತ್ತಿದೆಂದು ಹೇಳಲು ಆಗು ವುದಿಲ್ಲ. ಆದರೆ ಇದರಿಂದ ತಿಳಿದದ್ದು ಏನೆಂದರೆ ಕಾಫಿಗೆ ಗೊಬ್ಬರ ಕೊಡುವ ವಿಷಯದಲ್ಲಿ ಪರೀಕ್ಷಿಸಿ ತಿಳಿದುಕೊಳ್ಳುವ ಸಂಗತಿಗಳು ಬಹಳವಾಗಿರುವುದೆಂದು ಅಂದುಕೊಂಡಂತಾಯಿತು. ಮತ್ತು ಈಗಿನ ರೀತಿಯಲ್ಲಿ ನಾವು ಗೊಬ್ಬರ ಕೊಡುತ್ತಿರುವುದು ತುಂಬ ಆದಾಯವಾದ ದಪ್ಪವೆಂದು ಗೊತ್ತಾದಂತಾಯಿತು. ಅನವಶ್ಯವಾದ ಖರ್ಚನ್ನು ಉಳಿಸಿಕೊಳ್ಳಬೇಕೆಂದು ಆಕಪಡುವವರೂ ಈ ರೀತಿ ಯಲ್ಲಿ ಪರೀಕ್ಷೆಗಳನ್ನು ಮಾಡಿ ಗೊಬ್ಬರದ ಖರ್ಚನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಒಳ್ಳೆಯದಾಗಬಹುದೆಂದು ಇದ ರಿಂದ ಸ್ಪಷ್ಟವಾಗಿ ಹೇಳಿದಂತಾಯಿತು. ನಾವು ಜಮೀನಿನಲ್ಲಿ ಪ್ರತಿವರ್ಷವೂ ಬೆಳೆಗ್ಗೆ ಬೇಕಾದ ಸಸ್ಯ ಪೋಷಕ ಪದಾರ್ಥಗಳನ್ನು ಭೂಮಿಯಿಂದ ಅವನ್ನು ಪಡೆದುಕೊಳ್ಳುತ್ತಿದೆ. ಹೀಗೆ ಬೆಳೆಗೆ ನಷ್ಟವಾದ ಪದಾರ್ಥವನ್ನು ಸ್ವಲ್ಪವಾದ್ರೂ ಗೊಬ್ಬರ ಗೋಡು ಮುಂತಾದವುಗಳನ್ನ ಕೊಟ್ಟು ಅದಕ್ಕೆ ಹಂತರಿಗಿಸಬೇಕಲ್ಲವೆ? ಹೀಗೆ ಮಾಡದಿದ್ದರೆ ಆ ಜಮೀನಿನಿಂದ ನಾವು ಎಂದೆಂದಿ ಗೂ ಪೈರು ಬೆಳೆ ತೆಗೆದುಕೊಳ್ಳುತ್ತಿರಲು ಆಗಲಾರದಷ್ಟು ಸಲ್ಪ ಸಸ್ಯಪೋಷಕ ಪದಾರ್ಥವು ಭೂಮಿಗೆ ನಷ್ಟವಾಗುತ್ತದೆ. ಕಾಫಿಗೂ ಇತರ ಪೈರುಗಳಿಗಿಂತ ಮೇಲಾವ ಜಮೀನು ಬೇಕಾ ಗುತ್ತದೆ. ರಾತಾಂ ಸ್ಟೆಡ್ ಎಂಬ ಸ್ಥಳದಲ್ಲಿ ಈಗ್ಗೆ 50 ವರ್ಷಕ್ಕೆ ಮುಂದಿನಿಂದ ಬಂದ ಕೂಲಿಯಲ್ಲಿ ಬಂದೇ ರೀತಿಯಲ್ಲಿ ಒಳ್ಳೀ ಗೋಧಿ ಬೆಳೆಯು ಆಗುತ್ತಲಿದೆ. ಬಂದೇ ತೆರನಾದ ಎರಡು ತಾಕುಗಳ ಪೈಕಿ ಬಂದಕ್ಕೆ ಗೊಬ್ಬರ ಕೊಟ್ಟು ವತ್ತೊಂದಕ್ಕೆ ಕೊ ಡದ ಅವುಗಳಲ್ಲಿ ಬೆಳೆದ ಕಾಫಿಯ ಫಸಲನ್ನು ತಾಕವಾರಿಯ ಹೀಗೆ ಪ್ರತಿಯೊಂದು ತಾಕಿಗೂ ಮಾಡಿದ್ದಲ್ಲಿ ಗೊಬ್ಬರ ಕೊಟ್ಟದ್ದರಿಂದ ಏನೂ ಮೇಲೆ ದಂತೆ ಕಂಡುಬಂದಿಲ್ಲ. ಹೀಗಿರುವಲ್ಲಿ ಕಾಫಿ ಗಿಡಗಳಿಗೆ ಗೊಬ್ಬರ ಕೂಡುವ ವಿಷಯದಲ್ಲಿ ನಾವು ಜಾಗರೂಕರಾಗಿರ ಬೇಕು. ಯಾವಾವಾದರೂ ಬಂದೆರಡು ವಾದರಿ ಗೊಬ್ಬರವನ್ನು ಕೊಟ್ಟದ್ದರಿಂದ ಕೂಡುಬಂದ ಅನುಕೂಲತೆಯು ಆದರಿಂದ ಲೇ ವಿನಾ ವ್ಯತ್ಯಾವ ಹಟಕ್ಕಾದ ಕಾರಣದಿಂದಲೂ ಉಂಟಾಗಲಿಲ್ಲವೆಂದು ನಾವು ಗೊತ್ತು ಮಾಡಿಕೊಳ್ಳಬಾರದು ಆವಶ್ಯಕ. ಏಕೆಂದರೆ ಫಸಲೇನೂ ನಷ್ಟವಾಗದೆ ಖರ್ಚನ್ನು ಕಡಿಮೆ ಮಾಡುವುದಕ್ಕೆ ಆಗುವ ಪಕ್ಷದಲ್ಲಿ ಆ ಉಪಾಯವನ್ನು ನಾವು ಬೇಗ ಬಿಡಿಸಿಕೊಂಡ ಷ್ಟು ಒಳ್ಳೇದು. ಆದುದರಿಂದ ಕಾಫಿಗೆ ಗೊಬ್ಬರ ಕೊಡುವ ವಿಷಯದಲ್ಲಿ ಬಹಳಕಾಲದವರಿಗೂ ಅನೇಕ ಪರೀಕ್ಷೆಗಳನ್ನು ಮಾಡು ವುದು ಅವಶ್ಯಕವೆಂದು ನನ್ನ ಅಭಿಪ್ರಾಯವು. ಅನಾವಶ್ಯವಾದದಕ್ಕಿಂತ ಹೆಚ್ಚಾಗಿ ಗೊಬ್ಬರವನ್ನು ಕೊಡುವುದು ವ್ಯರ್ಥ. ಆದರಲ್ಲಿಯೂ ಬಹಳಕಾಲ ನೆಲದಲ್ಲಿ ನಿಶ್ಚಿಂತ ಹಿಂಡಿ ಮೊದಲಾವ ಗೊಬ್ಬರಗಳನ್ನು ಹೆಚ್ಚಾಗಿ ಕೊಡುವುದು ಸರಿಯಲ್ಲ. ಇದೊಂದು ಪಕ್ಷ, ಮತ್ತೊಂದು ಪಕ್ಷದಲ್ಲಿ—ಅವಶ್ಯವಿದ್ದದಕ್ಕಿಂತ ಕಡಿಮೆಯಾಗಿ ಗೊಬ್ಬರ ಕೊಟ್ಟಲ್ಲಿ ನ ಷೇ ಕ್ರಯ್ಯಾರ ನಷ್ಟವಪ ಡಿಸಿಕೊಂಡಂತಾಗುತ್ತದೆ. ಎಷ್ಟುಕಾಲದಿಂದ ಆಚರಣೆಯಲ್ಲಿದ್ದರೇನು ಪರೀಕ್ಷೆ ಮಾಡಿದ ಹೊರ್ತು ಯಾವದನ್ನೂ ತಿ ವರ್ಜಿಸು ವುದಕ್ಕೆ ಆಗುವದಿಲ್ಲವಾದುದರಿಂದ ಕೈಲಾದಮಟ್ಟಿಗೂ ಸಾಧಕಬಾಧಕ ಪರೀಕ್ಷೆಗಳನ್ನೆಲ್ಲಾ ಮಾಡಿ ಸಾಧ್ಯವಾಗಲ್ಲಿ ನವ ಕ್ಷ ಆಚರಣೆಯನ್ನು ತಿದ್ದಿಕೊಳ್ಳಬೇಕು. ಹೀಗೆ ಪರೀಕ್ಷೆ ಮಾಡುತ್ತಿರುವಲ್ಲಿ ಗೊಬ್ಬರ ಕಾಣದ ತಾಕುಗಳು ಯಾವಾಗಲೋ ಬಂದು ಸಲ ಹಂದಾಗು ವುವು. ಇವಾಗ ಹಿಂದಾಗುವ ಕಷ್ಟವು ಈಗ ಪ್ರಾಪ್ತವಾಗಿಲ್ಲ. ಆದುದರಿಂದ ಅಕ್ಕರತಾಗಿ ಹೀಗಾಯಿತೆಂಬ ಆಪತ್ತು ತಪ್ಪಿಸಿಕೊಳ್ಳಲು ಆಗುವುದ

53. ಬಿಳಿಪರಳು ಹಿಂಡಿ—6ನೆ ನಂಬರು ಬಿಳಿ ಹರಳಿನ ಹಿಂಡಿಯು ದೊಡ್ಡ ಕಾಳಿನಿಂದ ತೆಗೆದುದು ಇದು ಸಾಮಾನ್ಯವಾಗಿ ಸಿಕ್ಕುವ ಬಿಳಿ ಹರಳಿನ ರಚನೆಯು—ಇದರಿಂದ ಮಿಶ್ರಣಾದಿಯಾಗಿ ಕಂಡುಬಂದ ಎಲ್ಲಾ ರಚನೆಗಳನ್ನು ವಜಾ ಮಾಡಿದ್ದಾಯಿತು 5ನೆ ನಂಬರ್ ರಚನೆಯೂ ಕೂಡ ರಾಕಿಯಿಂದ ತೆಗದಂತೆ ಕಾಣುತ್ತೆ. ಇದಕ್ಕೆ ಮುಂಚೆ ಈ ಉದ್ಯೋಗಶಾಲೆಯಲ್ಲಿ ವಿಶ್ಲೇಷಿಸಿದ ಇತರ ರಚನೆಗಳಿಗಿಂತ ಇದರಲ್ಲಿ ಸಾರಜನಕವು ಕಮ್ಮಿಯಾಗಿದೆ. ಇದು ಮೈಸೂರು ಶೇವೆಯ ಹೊರಗೆ ತಯಾರಾಗಿ ಈ ಸೀಮೆಗೆ ಬಂದುದು. ಹೀಗಿರುವುದರಿಂದ ಈ ಗೊಬ್ಬರಗಳಲ್ಲಿರುವ ಪದಾರ್ಥಗಳ ಪರಿಮಾಣದ ವಿಷಯದಲ್ಲಿ ಅವುಗಳನ್ನು ತಯಾರುಮಾಡುವವರು ಕೊಂಡುಕೊಳ್ಳುವವರಿಗೆ ಭರವಸೆಯನ್ನು ಕೊಡಬೇಕೆಂದು ನಿರ್ಬಂಧಪಡಿಸುವುದು ಅವಶ್ಯವೆಂದು ಇದರಿಂದ ಗೊತ್ತಾಗುತ್ತದೆ.

54. ಕುರಡಿ—ಹೊಸದಾಗಿ ಏರ್ಪಡಿಸಿದ ಬಂದು ಉದ್ಯೋಗಶಾಲೆಯಲ್ಲಿ ತಯಾರಾದ ಗೊಬ್ಬರಗಳಲ್ಲಿರುವ ಪದಾರ್ಥಗಳ ಪರಿಮಾಣ ವಿಷಯದಲ್ಲಿ ಕೊಂಡುಕೊಳ್ಳುವವರಿಗೆ ಭರವಸೆ ಕೊಡುವುದಕ್ಕಾಗಿ ಅವುಗಳನ್ನು ಪರೀಕ್ಷಿಸಿ ನಿರ್ಧರಿಸಿದ್ದುದು ಸರಿಯಾಗಿದೆಯೋ ಇಲ್ಲವೋ ಎಂದು ಎಲ್ಲರು ಮೊಖಾಬಲೆ ಮಾಡಿಕೊಳ್ಳುವುದಕ್ಕಾಗಿ 206—207ನೆ ನಂಬರುಗಳನ್ನು ವಿಗ್ರಹಿಸಿದ್ದಾಯಿತು. 206ನೆ ನಂಬರಿನಲ್ಲಿ ಸಾರಜನಕವು ಅಪರಿಮಿತವಾಗಿದ್ದುದಾಗಿ ಸೂಚಿಸಿದ್ದರಿಂದ ಅದರಲ್ಲಿನೋ ತಪ್ಪುರಬಹುದೆಂದು ಯೋಚಿಸಿದೆ. ಆದರೆ ಅದು ತಪ್ಪಾಗಿರಲಿಲ್ಲ. ಈ ಕುರಡಿ ಹಿಂಡಿಯು ಯಾವುದೋ ಬಂದು ರಚನೆಯಲ್ಲಿ ಶೇಕಡಾ ಭರಪ್ಪು ಸಾರಜನಕವು ಇತ್ತು. ಇದರಲ್ಲಿ ಅಧಮಪಕ್ಷ ಶೇಕಡಾ 3·22ರಷ್ಟು ಸಾರಜನಕವಿರುತ್ತೆ. ಈ ಕುರಡಿ ಅಂದರೆ ಹುಸುಂಬೆ ಹಿಂಡಿಯಲ್ಲಿ ಕಂಡುಬರುವಷ್ಟು ಗುಣವ್ಯತ್ಯಾಸವು ಮತ್ಯಾವ ತಯಾರಿ ಗೊಬ್ಬರದಲ್ಲಿಯೂ ಕಂಡುಬರುವುದಿಲ್ಲ.

60. ಮೇಲೆ ಕಂಡ ಇತರ ವಿಧವಾದ ಹಿಂಡಿಗಳ ವಿಷಯದಲ್ಲಿ ಕೊಟ್ಟಿರುವ ಪರಿಮಾಣ ಸಂಖ್ಯೆಗಳನ್ನು ಕುರಿತು ವಿಶೇಷವಾಗಿ ಹೇಳತಕ್ಕದ್ದಿಲ್ಲ.

61. ಒಂದೇ ಜಾತಿಯ ಬೇರೆ ಬೇರೆ ರಚನೆಗಳನ್ನು ವ್ಯತ್ಯಾಸವನ್ನು ಅರಿತುಕೊಳ್ಳಬೇಕಾದರೆ ಈ ಜಾಬಿತೆಯ 5ನೆ ಸಂವತ್ಸರದ ಬಿನ್ನವತ್ತಲೆಯ 12ನೆ ಪುಟದಲ್ಲಿ, ಈ ನಾಲ್ಕನೆ ಬಿನ್ನವತ್ತಲೆಯ 15ನೆ ಪುಟದಲ್ಲಿ, 5ನೆ ಬಿನ್ನವತ್ತಲೆಯ 24ನೆ ಪುಟದಲ್ಲಿಯೂ ನೋಡಿ ತಿಳಿದುಕೊಳ್ಳಬಹುದು.

62 ಮೂಳೆ ಮತ್ತು ಮೀನು—ಈ ಕೆಳಗಿನ ತಖ್ತೆಯು ಜಮೀನಿನಲ್ಲಿಯೂ ವೆತ್ತು ಎಲುವಿನ ಪುಡಿಯಲ್ಲಿಯೂ ಇರುವ ಪದಾರ್ಥಗಳ ಪರಿಮಾಣವನ್ನು ತೋರಿಸಿರುತ್ತೆ. ಇದರ ವಿಷಯವಾಗಿ ಹೇಳತಕ್ಕದ್ದು ಏನೂ ಇಲ್ಲ. ಬಂಗಾರಪೇಟೆಜಾತಿ ಮೀನಿನಲ್ಲಿ ಅಪರಿಮಿತವಾಗಿ ಸಾರಜನಕವಿದೆ. ತೂರು ಅಥವ ಬೈಗಿಮೀನೆಂಬ ಬಂದು ತರಹೆ ಕಿರು ಮೀನಿನಲ್ಲಿ ಬಹಳ ಸ್ವಲ್ಪವಿತ್ತು. ಎಲುವು ಪುಡಿಗಳ ಪೈಕಿ ಸಾರಜನಕವು ಹಡಿಮೆಯಾಗಿದ್ದ ರಚನೆಯು ಮಿಶ್ರಣಾದಿಯೆಂದು ನಿಸ್ಸಂದೇಹವಾಗಿ ಹೇಳಬಹುದು.

10ನೆ ತಖ್ತೆ.

ಮೂಳೆ ಮತ್ತು ಮೀನು.

| ನಂಬರು | ಪದಾರ್ಥ | ಹಿಂದಿನ ವರ್ಷಗಳ ಫಲಿತಾರ್ಥಗಳು. | | | | | | 1901-05ನೆ ಸಾಲಿನ ವಿಗ್ರಹದ ಫಲಿತಾರ್ಥ. | | ಸ್ಥಳ. |
|---|---|---|---|---|---|---|---|---|---|---|
| | | ಸಾರಜನಕ | | | ರಂಜಕದ ಉಪ್ಪು. | | | | | |
| | | ಸರಾಸರಿ. | ಅಧಮಪಕ್ಷ | ಉತ್ತಮಪಕ್ಷ | ಸರಾಸರಿ. | ಅಧಮಪಕ್ಷ | ಉತ್ತಮಪಕ್ಷ | ಸಾರಜನಕ. | ರಂಜಕದುಪ್ಪು. | |
| | ಬಣ್ಣಮೀನು | 6·01 | 3·96 | 8·72 | 5·03 | 1·73 | 7·51 | ... | ... | |
| 56 | ಡಿಟೋ | ... | ... | ... | ... | ... | ... | 4·4 | 4·53 | ಪಶ್ಚಿಮತೀರ |
| 57 | ಡಿಟೋ | ... | ... | ... | ... | ... | ... | 6·3 | 3·61 | |
| | ವೆಳೆಪುಡಿ | 3·58 | 2·52 | 4·04 | 22·38 | 18·62 | 23·36 | ... | ... | |
| 71 | ಡಿಟೋ | ... | ... | ... | ... | ... | ... | 3·77 | 22·83 | ಬಂಗಳೂರು |

ಇತರ ತಯಾರಿ ಗೊಬ್ಬರಗಳು.

63. ನೀಲಗಿರಿಯಲ್ಲಿರುವ ತುಪಾಕಿ ಮದ್ದಿನ ಕಾರ್ಖಾನೆಯಲ್ಲಿ ಉಪ್ಪಾಗುವ ಸಜ್ಜಿಕ ಸಂಯುಕ್ತ ಗಂಧಕ ಲವಣವನ್ನು (Acid sulphate of Potash) ಗೊಬ್ಬರದಂತೆ ಉಪಯೋಗಿಸಬಹುದೆಂದು ಕೆಲವರು ಹೇಳುತ್ತಾರೆ. ಇದರಿಂದ ಗೊಬ್ಬರಕ್ಕೆ ಉಪಯೋಗವಾಗುವ ಯಾವ ಪದಾರ್ಥವನ್ನಾಗಲಿ ಉಪಯೋಗಿಸುವುದಕ್ಕೆ ಜನರಿಗೆ ಆಕ್ಷೇಪವಿರುವಂತೆ ಗೊತ್ತಾಗಿಲ್ಲವಾದುದರಿಂದ ಈ ದಕ್ಷಿಣದೇಶದ ವರ್ಣ್ಣನೆಯಲ್ಲಿ ಅಶ್ಲೇಷವಾಗಿ ಸುಣ್ಣವಿಶ್ಲೇಷವಾಗಿರುವುದರಿಂದ ಸಜ್ಜಿಕ ಗಂಧಕ ಮಿಶ್ರಿತವಾದ ಉಪ್ಪು ಗೊಬ್ಬರಕ್ಕೆ ಅನುಕೂಲವಾಗುವದಿಲ್ಲ. ಸಸ್ಯಗಳಿಗೆ ಇದು ಬಹಳ ವಿಷವಾಗಿ ಪರಿಣಮಿಸಬಹುದು. ಆದರೆ ಈ ಸಂಗತಿಗಳನ್ನು ಪರೀಕ್ಷಿಸುವುದಕ್ಕೆ ಇದುವರೆಗೆ ಯಾವ ಪ್ರಯತ್ನವೂ ಮಾಡಿಲ್ಲ. ಕೂಡಲೆ ಸುಟ್ಟು ಸುಣ್ಣವನ್ನು ಅದರೊಂದಿಗೆ ಹೆಚ್ಚು ಕವಿಯ ಸರಿಪಾಲು ಬೆರಸಿದರೆ ಪ್ರಾಯಶಃ ಗೊಬ್ಬರಕ್ಕೆ ಅನುಕೂಲಿಸಬಹುದು. ಆದರೆ ಸುಣ್ಣದ ಬೆಲೆಯು ಹೆಚ್ಚಾಗಿರುವುದು ಮತ್ತು ಈ ರೀತಿಯಲ್ಲಿ ಉಪಯೋಗಿಸಿದರೆ ಪರೋಕ್ಷವಲ್ಲಿ ಗೊಬ್ಬರದಂತೆ ಪರಿಣಮಿಸುವ ಅದರ ಗುಣಕ್ಕೆ ಬಹುಮಟ್ಟಿಗೆ ನ್ಯೂನತೆ ಉಂಟಾಗು

ವುದು. ಈ ಕಾರಣವಂದ ಇದನ್ನು ಒಬ್ಬರೂ ಎಲ್ಲಿ ತೆಗೆದುಕೊಳ್ಳಬೇಕು ಇದು ಸಿಕ್ಕುವುದೋ ಅಲ್ಲದ್ದೋ ಎಂಬುದನ್ನು ಪರೀಕ್ಷಿಸಿಲ್ಲ. ಕೊಯಿಮತ್ತೂರಿನಲ್ಲಿರುವ ಸ್ಟೇನ್ಸ್ ಸಂಘದವರು ಈ ಸರ್ಜಿಕ ಸಂಯುಕ್ತ ಗಂಧಕ ಲವಣವನ್ನು ಎಲುವಿನ ಪುಡಿಯೊಂದಿಗೆ ಸೇರಿಸಿರುತ್ತಾರೆ. ಹೀಗೆ ಮಾಡುವುದರಲ್ಲಿ ಅವರ ಅಭಿಪ್ರಾಯವೇನಂದರೆ ಎಲುವಿನ ಪುಡಿಗೆ ಗಂಧಕ ದ್ರಾವಕವನ್ನು ಸೇರಿಸಿದರ ಏನಾಗುತ್ತದೋ ಅದೇರೀತಿಯಲ್ಲಿ ಸರ್ಜಿಕ ಸಂಯುಕ್ತ ಗಂಧಕ ಲವಣವು ಪ್ರವರ್ತಿಸುವುದೆಂದು ಊಹಿಸಿರುತ್ತಾರೆ. ಆದರೆ ಎಲುವಿನ ಪುಡಿಯೂ ಗಂಧಕದಲವಣವೂ ಎರಡೂ ಪುಡಿಯಾಗಿದ್ದುದರಿಂದ ಅವುಗಳಲ್ಲಿ ಪರಸ್ಪರ ಪರಿವೃತ್ತಿಗೆ ಅನುಕೂಲವಾಗಲಿಲ್ಲ ಆದಾಗ್ಯೂ ಈ ಮಿಶ್ರದ್ರವ್ಯವನ್ನು ವಿಗ್ರಹಿಸಲು ಸ್ವಲ್ಪವಷ್ಟಕ್ಕೆ (ಆ ಪದಾರ್ಥಗಳ ಗುಣ ವ್ಯತ್ಯಾಸವಾಯಿತೆಂದು ತಿಳಿಯಬರುತ್ತೆ.) ಆ ಪದಾರ್ಥಗಳಲ್ಲಿ ಪರಿವೃತ್ತಿ ಉಂಟಾಯಿತೆಂದು ಗೊತ್ತಾಯಿತು. ಹೇಗಂದರೆ, ಈ ಮಿಶ್ರದ್ರವ್ಯದಲ್ಲಿ ಲಿಟ್ಮಸ್ ಕಾಗದಗಳಿಗೆ ಉದಾಸೀನವಾಗಿರುವ * ಅಮೋನಿಯಂ ಸಿಟ್ರೇಟ್ ಎಂಬ ಉಪ್ಪಿನ ನೀರಿನಲ್ಲಿ ಕರಗುವ ರಂಜಕದ ಉಪ್ಪು ಶೇಕಡ 8·0ರಂತೆ ಸಿಕ್ಕಿತು. ಸರ್ಜಿಕ ಗಂಧಕ ಸಂಯುಕ್ತ ಲವಣವನ್ನು ಸೇರಿಸಿದ್ದರಿಂದ ಪ್ರಮಾಣವು ಹೆಚ್ಚಾಗಲು ಅದರಲ್ಲಿ ರಂಜಕಲವಣವು ಸುಮಾರು ಶೇಕಡಾ 2ರಂತೆ ಇದ್ದುದು 13·58ರಷ್ಟಕ್ಕೆ ಇಳಿಯಿತು. ಈ ಮಿಶ್ರದಲ್ಲಿದ್ದ ರಂಜಕ ಲವಣದ ಪೈಕಿ ಶೇಕಡಾ 59·57 ರಷ್ಟು ಸಸ್ಯ ಪೋಷಣೆಗೆ ಉಪಯೋಗವಾಗುವ ಸ್ಥಿತಿಯಲ್ಲಿತ್ತು. ಈ ಮಿಶ್ರದ್ರವ್ಯವನ್ನು ಮಾಡಲು ಉಪಯೋಗಿಸಿದ ಶುದ್ಧ ಎಲುವಿನ ಪುಡಿಯು ಮಾದರಿಯನ್ನು ಕಳುಹಿಸಲಿಲ್ಲವಾದುದರಿಂದ ಇಲ್ಲಿಯೇ ಇದ್ದ ಒಂದು ರಖಂ ಎಲುವಿನ ಪುಡಿಯನ್ನು ವಿಗ್ರಹಿಸಲು ಅದರಲ್ಲಿರುವ ರಂಜಕ ಲವಣದ ಪೈಕಿ ಶೇಕಡಾ 27·16ರಷ್ಟು ಸಸ್ಯೋಪಯೋಗಕ್ಕೆ ಅನುಕೂಲಿಸುವ ಸ್ಥಿತಿಯಲ್ಲಿತ್ತು. ಅಲ್ಲಿನ ಎಲುವಿನ ಪುಡಿಯೂ ಇಲ್ಲಿನ ಎಲುವಿನ ಪುಡಿಯೂ ಬಂದೇ ವಿಧವಾಗಿದ್ದ ಪಕ್ಷದಲ್ಲಿ (ಹಾಗೆ ಇಲ್ಲದೆ ಇರುವುದಕ್ಕೆ ಯಾವ ಕಾರಣವೂ ತೋರುವುದಿಲ್ಲ. ಸರ್ಜಿಕ ಗಂಧಕ ಸಂಯುಕ್ತ ಲವಣವು ಪುಡಿಯಾಗಿದ್ದರೂ ಎಲುವಿನ ಪುಡಿಯಲ್ಲಿ ವ್ಯಾಪಿಸಿ ಗುಣವ್ಯತ್ಯಾಸ ಮಾಡಿತೆಂದು ನಿಸ್ಸಂದೇಹವಾಗಿ ತೋರುತ್ತದೆ. ಹೀಗೆ ಸರ್ಜಿಕ ಗಂಧಕ ಸಂಯುಕ್ತ ಲವಣದಿಂದ ಎಲುವಿನ ಪುಡಿಯಲ್ಲಿ ಗುಣವ್ಯತ್ಯಾಸ ಉಂಟಾದಹಾಗೆಲ್ಲಾ ಆ ಲವಣದ ದುರ್ಗುಣಗಳು ಕಡಿಮೆಯಾಗುವುದರಿಂದ ಜನ್ನಾಗಿ ದೂಳಾದ ಎಲುವಿನ ಪುಡಿಗೆ ಮಂದವಾದ ಆ ಲವಣದ ನೀರನ್ನು ಬೆರಸಿದರೆ ಎಲುವಿನ ಪುಡಿಯು ವಿಶೇಷವಾಗಿ ಸಸ್ಯ ಪೋಷಣೆಗೆ ಉಪಯೋಗವಾಗುವಂತೆ ಮಾಡುವುದರಿಂದ ಸಸ್ಯವೃದ್ಧಿಗೆ ವಿರೋಧವಾದ ಅದರ ದುರ್ಗುಣಗಳನ್ನೇ ಅನುಕೂಲವಾಗುವಂತೆ ಮಾಡಬಹುದು. ಕೊಯಿಮತ್ತೂರಿನಲ್ಲಿರುವ ಸ್ಟೇನ್ಸ್ ಸಂಘದವರು ಈ ವಿಷಯದಲ್ಲಿ ಪ್ರಯತ್ನಪಡುವುದಾಗಿ ಹೇಳಿದ್ದಾರೆ ಹಾಗೆ ಅವರು ಮಾಡಿದ ಗೊಬ್ಬರದ ಮಾದರಿಯನ್ನು ಈ ಇಲಾಖೆಯಲ್ಲಿ ವಿಗ್ರಹಿಸಿ ಅದನ್ನು ತೋಟಗಳಲ್ಲಿ ಬಳಿ ಮಾಡುವುದಕ್ಕೆ ಉಪಯೋಗಿಸಿ ಪರೀಕ್ಷಿಸುತ್ತದೆ.

64. ತಿರುಚನಾಪಲ್ಲಿಯ ರಂಜಕಲವಣ—ಈ ಲವಣದ ಉಪಯೋಗದ ವಿಷಯದಲ್ಲಿ ಅನೇಕರು ವಿಚಾರಿಸಿದುದರಿಂದ ಅದರ ಬಂದು ರಖಮನ್ನು ವಿಗ್ರಹಿಸಿದ್ದಾಯಿತು. ಅದು ಕಲ್ಲಾಗಿರುವುದರಿಂದ ಅದನ್ನು ರಂಜಕಲವಣವನ್ನು (ಸೂಪರ್‌ಫಾಸ್ಫೇಟನ್ನಾಗಿ) ಮಾಡಿದ ಹೊರ್ತು ಗೊಬ್ಬರಕ್ಕೆ ಉಪಯೋಗವಾಗಲಾರದು. ಹೀಗಿದ್ದರೂ ಅದನ್ನು ನಾರಾಗಿ ಪುಡಿಮಾಡಿ ಒಂದು ಅಂಗುಲಕ್ಕೆ 100 ಕಣ್ಣುಗಳುಳ್ಳ ಒಂದರಿಯಲ್ಲಿ ಶೋಧಿಸಿದ್ದಾಯಿತು. ಆದರೆ ಅದರಲ್ಲಿದ್ದ ರಂಜಕಲವಣದ ಪೈಕಿ ಅತಿ ಸ್ವಲ್ಪವಷ್ಟಕ್ಕೆ ಲಿಟ್ಮಸ್ ಕಾಗದಗಳಿಗೆ ಉದಾಸೀನವಾಗಿರುವ ಅಮೋನಿಯಂ ಸಿಟ್ರೇಟ್ ಲವಣದ ನೀರಿನಲ್ಲಿ ಕರಗಿತು. (ಈ ವಿಷಯವು 49ನೆ ಪುಟದಲ್ಲಿ ಕೊಟ್ಟಿರುವ ತಖ್ತೆಯನ್ನು ನೋಡಿದರೆ ವಿಶದವಾಗುತ್ತದೆ.) ಆದುದರಿಂದ ಯೂರೋಪ್ ಖಂಡದಲ್ಲಿಯೂ ಅಮೆರಿಕಾ ಖಂಡದಲ್ಲಿಯೂ ಮಾಡುವ ಅಂದಾಜಿನ ಪ್ರಕಾರ ಇದರಲ್ಲಿ ಉಪಯೋಗವಾದ ಪದಾರ್ಥವು ಶುದ್ಧಾಂಗವಾಗಿ ಇಲ್ಲವೆನ್ನಬೇಕು.

65. ಎಲುವಿನ ಇದ್ದಲು.—ಸಕ್ಕರೆ ಕಾರ್ಖಾನೆಯಲ್ಲಿ ಉಪಯೋಗಿಸಿ ವಿಸಾಟು ಎಲುವಿದ್ದಲಿನಲ್ಲಿ ಬಹಳವಾಗಿ ಸಾರಜನಕವಿತ್ತು. ಆದರೆ ಇದರೊಡನೆ ಗಂಧಕ ದ್ರಾವಕವನ್ನು ಬೆರಸಿ ರಂಜಕಲವಣ ಕ್ರಮವನ್ನಾಗಿ ಮಾಡಿದ ಹೊರತು ನಿರುಪಯೋಗವಾದುದೆಂದು ಅಭಿಪ್ರಾಯಪಡುತ್ತಾರಾದುದರಿಂದ ಅದರಲ್ಲಿ ಬಹಳವಾಗಿ ಸಾರಜನಕವಿರುವದರಿಂದ ಮಾತ್ರಕ್ಕೆ ಅದನ್ನು ಒಳ್ಳೆ ಗೊಬ್ಬರವನ್ನಾಗಿ ಹೇಳಲಾಗುವುದಿಲ್ಲ. ಮತ್ತು ಅದರಲ್ಲಿರುವ ಸಾರಜನಕವು ಪ್ರಾಯಶಃ ಜಡ ನಿಷ್ಪ್ರಯೋಜಕವಾಗಿರುತ್ತದೆ.

66. ಕತ್ತಾಳೆ ನಾರಿನ ಕಸ—ಕರ್ವೆರಾಯನಬಿಟ್ಟಿದಿಂದ ಕಳುಹಿಸಿದ ಸಣ್ಣ ಕತ್ತಾಳೆ ನಾರಿನ ಕಸದಲ್ಲಿ ಶೇಕಡಾ 1·64 ರಷ್ಟು ಸಾರಜನಕವಿತ್ತು. ಆದುದರಿಂದ ಗೊಬ್ಬರವಾಗಿ ಉಪಯೋಗಿಸಲು ಇದನ್ನು ಬಹುದೂರ ಸಾಗಿಸಿಕ್ಕೊಂಡು ಹೋಗುವುದರಿಂದ ಆದಾಯಕರವಾಗಿ ತೋರಿಬರುವುದಿಲ್ಲ. ಅದರಲ್ಲಿರುವ ಸಾರಜನಕವು ಇಲ್ಲಿ ವಿಗ್ರಹಿಸಿದ ಈಚೇ ದರ್ಜೆ ಹಿಪ್ಪೆ ಹಾಕಿ ಇಲ್ಲಿರುವುದಕ್ಕಿಂತ ಸ್ವಲ್ಪ ಕಮ್ಮಿಯಾಗಿದೆ. ಆದರೆ ಹಿಂಡಿಗಳಲ್ಲಿರುವ ಸಾರಜನಕದಂತೆ ಅದರಲ್ಲಿರುವುದು ಸಸ್ಯ ಪೋಷಣೆಗೆ ಅನುಕೂಲವಾಗಿಲ್ಲದುದರಿಂದಲೂ ಅದು ಅಡಕವಾಗಿಲ್ಲದುದರಿಂದಲೂ ಅದನ್ನು ವ್ಯಾಪಾರಕ್ಕನುಕೂಲವಾದ ಗೊಬ್ಬರವೆಂದು ಹೇಳಲಾಗುವುದಿಲ್ಲ. ಹೀಗಿದ್ದರೂ ಪೈರು ಭೂಮಿಲಿಡುವುದಕ್ಕೆ ಅನುಕೂಲವಾಗುವಂತೆ ಭೂಮಿಯನ್ನು ಪೊಳ್ಳು ಮಾಡಬೇಕಾದಲ್ಲಿ ಇದು ಹಗುರವಾಗಿಯೂ ಗುಂಜೆನಂತೆಯೂ ಇರುವುದರಿಂದ ಉಗಯೋಗವಾಗಬಹುದು. ನೆಲವನ್ನು ಪೊಳ್ಳುಗೆಡುವವ ಗೊಬ್ಬರವು ಬಹಳ ಉಪಯೋಗವಾದುದರಿಂದ ಕತ್ತಾಳೆ ನಾರಿನ ಕಾರ್ಖಾನೆಗಳ ಕಸವನ್ನು ಅವುಗಳಿಗೆ ಹತ್ತಿರದಲ್ಲಿರುವ ಭೂಮಿಗಳಿಗೆ ಉಪಯೋಗಿಸಿದ್ದಲ್ಲಿ ಅದೂ ಆ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಉಪಯೋಗ ಪದಾರ್ಥವೆಂದೆಣಿಸಿಕೊಳ್ಳುತ್ತದೆ.

67. ಬೂದಿ ಪ್ರತಿ ವರ್ಷದಲ್ಲೂ ಗೊಬ್ಬರಕ್ಕಾಗಿ ಸಾದೆಯ ಬೂದಿಯನ್ನು ಬಹಳವಾಗಿ ಬಳಸುತ್ತಾರೆ. ಇದಕ್ಕೆಂದೇ ಪೊಳ್ಳೆಯನ್ನುರಿಸಿ ಬೂದಿಯನ್ನು ಮಾಡುತ್ತಾರೆ. ಇದರಿಂದುಂಟಾದ ಉರಿಯನ್ನು ಯಾವುದಕ್ಕೂ ಉಪಯೋಗಿಸುವುದಿಲ್ಲ. ಹೀಗೆ ಮಾಡಿದ ಬೂದಿಯಲ್ಲಿ ಒಂದೊಂದು ಸಲ ಸರ್ಜಿಕವು ಬಹಳ ಕವ್ಮಿಯಾಗಿರುತ್ತದೆ. ಆದುದರಿಂದ ಪುಳ್ಳೆಗೇನೂ ಬೆಲೆ ಇಲ್ಲದಿದ್ದರೂ ಕೂಲಿಗಾರರಿಗೆ ಮತ್ತೇನೂ ಕೆಲಸ ದೊರೆಯದೆ ಸುಲಭಕೂಲಿಗನವರು ಬಂದರೂ ಈ ಬೂದಿಯನ್ನು ಮಾಡುವುದರ ಖರ್ಚು ಕೂಡ ಹೊರಡುವುದಿಲ್ಲ. ಈ ಕೆಳಗೆ ಕೊಟ್ಟಿರುವ ತಖ್ತೆಯ 60-62ನೆ ನಂಬರುಗಳು ಈ ತರಹೆ

* ಇದು ಗೊಬ್ಬರಗಳಲ್ಲಿ ಕೆಲಸಕ್ಕೆ ಬರುವ ರಂಜಕದ ಉಪ್ಪನ್ನು ಕಂಡುಹಿಡಿಯುವುದಕ್ಕೆ ಉಪಯೋಗಿಸುವ ಪದಾರ್ಥ.

ಯವು–ಇವುಗಳಿರಡರಲ್ಲಿಯೂ (Hydrochloric acid) ಸಂಯುಕ್ತ ಉಪ್ಪಿನದ್ರಾವಕದಲ್ಲಿ ಕರಗುವ ಸರ್ಜಿಕವು ಕೇಕಡ 1ರಷ್ಟು ಇದೆ. ಇದರ ಪೈಕಿ ಅರ್ಧಕ್ಕಿಂತ ಹೆಚ್ಚಾಗಿ ಕುಡಿಯುವ ನೀರಿನಲ್ಲಿ ಕರಗುವುದಿಲ್ಲವಾದುದರಿಂದ ಅಷ್ಟೇ ಉಪಯೋಗಕ್ಕೆ ಸಿದ್ಧವಾಗಿದೆ. ಆದುದರಿಂದ ಈ ಬೂದಿಯ ಬಂದು ಟ್ಯೂ ಮೂರು ರೂಪಾಯಿಗಿಂತ ಕಡಿಮೆ ಬೆಲೆ ಬಾಳುತ್ತದೆ. ಇವಕ್ಕಿಂತ ಬೇರೆ ಜಾತಿ ಪುಳ್ಳಿ ಉರಿಸಿ ಮಾಡಿದ 30—32ನೇ ನಂಬರ್ ಮಾದರಿಗಳು ಬಹಳ ಮೇಲಾಗಿವೆ. ಇವುಗಳು ಮುಂದೆ ಹೇಳಿದ ಮಾದರಿಗಳಿಗಿಂತ ಎರಡರಷ್ಟು ಬಾಳುತ್ತವೆ. ಇವುಗಳಲ್ಲಿಯೂ ಕೂಡ ಸರ್ಜಿಕವು ಕಡಮೆ. 63ನೆ 64ನೆ ನಂಬರು ಗಳಲ್ಲಿ ಮೇಲಾದ ರಖನುಗಳು ಅದರೆ ಇದುವರಿಗೂ ವಿಗ್ರಹಸಿದ್ದರಲ್ಲಿ 33ನೆ ನಂಬರೆ ಮೊದಲು ತರಹೆ. ಇದು ಬಿದರು ಬೂದಿ–ಕೊಡಗಿನಿಂದ ಬಂದುದು. ಈ ರಖನುನ್ನು ಬಹಳ ಕೀಳುತರಹೇದೆಂದು ಜನರು ತಿಳಿದುಕೊಂಡಿರುವುದು ಆಶ್ಚರ್ಯವಾಗಿದೆ. ಪ್ರಾಯಶಃ ಇದು ಹಗುರವಾಗಿರುವುದರಿಂದ ಹೀಗೆ ತಿಳಿದಿರಬಹುದು. ಮುಂದೆ ಲಂಟಾನಾ ಮುಂತಾದ ಗಿಡಗಳ ಬೂದಿಗಳನ್ನು ನಿಗ್ರಹಿಸಲಾಗುತ್ತದೆ. ಅವುಗಳಲ್ಲಿರುವ ಸರ್ಜಿಕದ ಕೇಕಡ ಹೆಚ್ಚಾಗಿದ್ದರೆ ಪ್ರಾಯಶಃ ಲಂಟಾನಾ ಗಿಡಗಳು ಶಿಕ್ಕಿದಹಾಗೆ ಬೆಳೆಯುವುದನ್ನೂ ತಪ್ಪಿಸುವುದಕ್ಕೆ ಇದೊಂದುಪಾಯವಾಗಿರುತ್ತೆ. ಲಂಟಾನಾ ಜಾತಿ ವಿನಾ ಇತರ ಜಾತಿ ಗಿಡಗಳನ್ನು ಬೂದಿಗೋಸ್ಕರ ವಾಗಿಯೂ ಸುಡುವುದನ್ನು ನೋಡಿದರೆ ವ್ಯಸನವಾಗುತ್ತದೆ.

11ನೆ ನಂಬರು ತಕ್ತೆ.

ಬೂದಿ ಮತ್ತು ಇತರ ಚಿಲ್ಲರೆ ಗೊಬ್ಬರಗಳು.

| ನಂಬರು. | ಪದಾರ್ಥ. | ಸಾರಜನಕ. | ರಂಜಕ ಆಮ್ಲ. | ಪೊಟಾಷಿಯಮ್ ಸಂಯುಕ್ತ ಕರಗುವ ರಂಜಕಾಮ್ಲ ಲವಣ | ಸರ್ಜಿಕ. | ನೀರಿನಲ್ಲಿ ಕರಗುವ ಸರ್ಜಿಕ. | ಸುಣ್ಣ. | ಸಸ್ಯಪದರ್ಥ ಉಂಟುಮಾಡುವ ಸಸ್ಯ. | ಕರಗದ ನಿಂತದ್ದು. |
|---|---|---|---|---|---|---|---|---|---|
| | ಮೂಳೆಪುಡಿ | 4·04 | 23·34 | 6·34 | .... | ... | ... | ... | ... |
| 188 | ಸಮತೂಕವಾಗಿ ಕೇರಿಸಿದ ಬಣ ಸರ್ಜಿಕ ಸಂಯುಕ್ತ ಗಂಧಕ ಲವಣ ಮತ್ತು ಮೂಳೆಪುಡಿ. | .. | 13·58 | 8·09 | .. | .. | ... | .. | ... |
| 204 | ತಿರುಚನಾಪಲ್ಲಿಯ ರಂಜಕ ಲವಣ. | .. | 25·51 | 0·38 | ... | .... | 43·86 | .. | .. ... |
| 37 | ಮೂಳೆ ಇದ್ದಲು | 1·21 | 27·80 | ... | ... | ... | ... | ... | .. |
| 31 | ಮಡ್ಡಿಕಟ್ಟುಪ್ಪು .. | 3·63 | .... | .... | .. | 16·71 | .. | ... | .. |
| 54 | ಕೋಧಿಸಿದ ಒಟ್ಟುಪ್ಪು ... | 12·95 | .. | .... | ... | 39·58 | .. | ... | .. |
| 187 | ಕತ್ತಾಳೆ ನಾರಿನ ಕಸ .... | 1·64 | .. | ... | .... | .. | ... | ... | .. |
| 29 | ಬೂದಿ ... | .. | 1·15 | ... | ... | ... | 11·51 | 26·90 | 45·54 |
| 60 | ಮಿಶ್ರಜಾತಿ ಮರದ ಬೂದಿ.. | ... | ... | ... | ·93 | 0·61 | .. | 15·54 | .... |
| 62 | ಡಿಟೋ .. | ... | ... | ... | ·78 | 0·40 | ... | ... | ... |
| 63 | ಬೆರಣಿ ಬೂದಿ ... | .... | ... | ... | 4·82 | 2·53 | ... | ... | ... |
| 64 | ಆವಿಗೆ ಬೂದಿ ... | ... | | .... | 3·47 | 1·90 | ... | ... | ... |
| 30 | ವಿಶ್ರಜಾತಿ ಮರದ ಬೂದಿ. | .. | 0·57 | ... | 2·32 | .. | 17·43 | 20·24 | 44·50 |
| 32 | ಡಿಟೋ ... | .. | 1·45 | ... | 1·97 | .. | 29·04 | 24·94 | 24·40 |
| 33 | ಬಿದರು ಬೂದಿ .. | ... | 2·54 | ... | 5·40 | .. | ... | ... | .... |

ಚಿಲ್ಲರೆ ವಿಷಯ.

68. ಸ್ಫಟಿಕದಿಂದ ನೀರನ್ನು ಕೊಳೆಯಿಲ್ಲದಂತೆ ಮಾಡಿ ನಿರ್ಮಲಮಾಡುವುದು—ಹೆಪ್ಪ್ಯೂಟ್ ಇಂಜನಿಯರವರು ಅಪೇಕ್ಷಿಸಿದ್ದರವೇಲೆ ಹೆಸರುಗಟ್ಟುವಕೆರೆ ನೀರನ್ನು ಕೊಳೆಯಿಲ್ಲದಂತೆ ಮಾಡುವುದಕ್ಕಾಗಿ ಎಷ್ಟು ಸ್ಫಟಿಕ ಜೀಕಾಗುವುದೆಂದು ಅಂದಾಜು ಮಾಡುವುದಕ್ಕಾಗಿ ಕೆಲವು ಪರೀಕ್ಷೆಗಳನ್ನು ಮಾಡಿದ್ದಾಯಿತು. ನೀರಿನಲ್ಲಿ ತೇಲಾಡುತ್ತಿರುವ, ಕೊಳೆಯು ತಳಕಿಳಿಯುವುದಕ್ಕೆ ಯಾವಾಗ ಮೊದಲಾಯಿತೆಂದು ಗೊತ್ತಾಗಿ ಹೇಳುವುದು ಕಷ್ಟ. ಮತ್ತು ಯಾವ ಉಪಕರಣಗಳೂ ಇಲ್ಲದೆ ಮಾಡಿದ ಇಂತಹ ಪರೀಕ್ಷೆಗಳಲ್ಲಿ ಯಾವಾಗ ನೀರಿನಲ್ಲಿ ಶುದ್ಧಾಂಗವಾಗಿ ಕೊಳೆಯಿಲ್ಲವೆಂದು ಕಂಡುಹಿಡಿಯುವುದೂ ಕಷ್ಟ. ಏತಕ್ಕೆಂದರೆ ನೀರನ್ನಿಟ್ಟಿರುವ ಗಾಜಿನ ಬಟ್ಟಲಿನ ಪಕ್ಕಗಳಿಗೆ ಅದರಲ್ಲಿ ತೇಲಾಡುತ್ತಿರುವ ಸೂಕ್ಷ್ಮವಾದ ಕೊಳೆಯು ಬಹಳನಾಗಿ ಅಂಟಿಕೊಳ್ಳುತ್ತೆ. ಆದರೆ ಸಾಮಾನ್ಯವಾಗಿ ಕೆಲಸಗಳಿಗೂ ಈ ಕೆಳಗೆ ಕೊಟ್ಟಿರುವ ಸಂಖೆಗಳು ಸರಿಯಾದ್ದಾಗಿಯೇ ಇವೆ. ಪ್ರಾಯಶಃ ಮನೆಗಳಲ್ಲಿ ನೀರನ್ನು ಶೋಧಿಸಿಕೊಳ್ಳುವವರಿಗೆ ಉಪಯೋಗವಾಗಬಹುದು. ಪರೀಕ್ಷೆಗೆ ಉಪಯೋಗಿಸಿದ ನೀರು ಬಹಳ ವಂಡಾಗಿ ರಾಡಿಯಾಗಿತ್ತು. ಬಂದು ಗ್ಯಾರ್ಲಗೆ 2 ಗ್ರೇ (2ಸೇರು ನೀರಿಗೆ ಚಕ್ಕಾಸು ತೂಕ) ಅಥವಾ 200 ಗ್ಯಾರ್ಲಗಳಿಗೆ 1 ಪೌನ್ಡು ತೂಕ ಹಾಕಿದಲ್ಲಿ 7 ಘಂಟೆ ಹೊತ್ತಿನಲ್ಲಿ ನೀರನ್ನು ತಿಳಿ ಮಾಡುವುದಕ್ಕೆ ಸಾಕಾಗಿರುತ್ತದೆ. ಆದರೆ ಸಾಲ್ಕರಷ್ಟು ಹಾಕಿದರೂ ಅದೇ ಫಲವಾಗುತ್ತದೆ. ಅದಕ್ಕಿಂತ ಕಡಿಮೆಯಾದರೆ ನೀರು ಚೆನ್ನಾಗಿ ತಿಳಿಯಾಗುವುದಿಲ್ಲ.

ಉಪಯೋಗಿಸಿದಾಗ ಬಂದು ದಿವಸಕ್ಕಿಂತ ಹೆಚ್ಚಾಗಿ ಆಲುಗಿಸದೆ ಇಟ್ಟಿದ್ದಲ್ಲಿ ವಿನಾ $1\frac{1}{2}$ ಗ್ರೇ ಸಾಕಾಗದೆ ಹೋಯಿತು.

14 ನವಂಬರ್ ತಕ್ತೆ

| ಗ್ಯಾಲ್ವನ್ ಬಂದಕ್ಕೆ ಎಷ್ಟು ಗ್ರೇಸ್ ಸ್ಪಟಕ | ಯಾವಾಗ ತಿಳಿಯುವದಕ್ಕೆ ಆರಂಭವಾಯಿತು. | ಎಷ್ಟು ಘಂಟೆಗಳಿಗೆ ತಿಳಿಯಾಯಿತು. |
|---|---|---|
| 8 | 2 | 5 |
| 5 | 3 | 5 |
| 4 | 3 | 5 |
| 3 | 3 | 5 |
| 2 | 3 | 7 |
| 1½ | 5 | 27 |
| 1 | 96 | ... |
| 0 | ... | ... |

69. ಉಪ್ಪು—ಎರಡು ರಖಮು ಸಮುದ್ರದ ಉಪ್ಪನ್ನು ನಿಗ್ರಹಿಸಿದ್ದಾಯಿತು. ಒಂದರಲ್ಲಿ 92ರಷ್ಟು ಕೇಕಡ 84ರಷ್ಟು ಮತ್ತೊಂದರಲ್ಲಿ ಉಪ್ಪಿತ್ತು. ಮುಖ್ಯ ರಖಮಿನಲ್ಲಿ ಕೇಕಡಾ 1·66ರಷ್ಟು ಮ್ಯಾಗ್ನೀಷಿಯಾ ಸಲ್ಫ ಸುನ್ನು ಸರ್ಜಿಕ, ಗಂಧಕದ್ರಾವಕ ಇವೆಲ್ಲವೂ ಸೇರಿ ಇದ್ದವು. ಆವಲೆ ರಖಮಿನಲ್ಲಿ ಕೇಕಡ 77ರಷು ಮ್ಯಾಗ್ನೀಷಿಯವೂ ಇತರ ವಸ್ತು ಗಳು ಮೇಲೆ ಕಂಡ ಕೀಳು ರಖಮಿನಲ್ಲಿದ್ದುದರಲ್ಲಿ ಅರ್ಧಪಾಲು ಇದ್ದವು. ಮಿಕ್ಕ ಕಲ್ಮಷಗಳು ಯಾವವಂದರೆ ಮರಳು ವಗೈರೆ ಕರಗದ ವಸ್ತುಗಳು ಮತ್ತು ನೀರು.

70. ಕ್ಷಾಮ ಕಾಲದಲ್ಲಿ ಉಪಯೋಗವಾಗುವ ಆಹಾರ ಪದಾರ್ಥಗಳು—ಕ್ಷಾಮ ಕಾಲದಲ್ಲಿ ತಿಂಡಿಗಾಗಿ ಉಪಯೋಗವಾ ಗುವ 22 ಹೊಸ ಪದಾರ್ಥಗಳು ಈ ವರ್ಷ ಪರೀಕ್ಷೆಗಾಗಿ ಬಂದವು. ಅವುಗಳೊಳಗೆಲ್ಲ ಸಾರಜನಕ ಪ್ರಮಾಣವನ್ನ ಗೊತ್ತು ಮಾಡಿರುತ್ತೆ. ಹೋದವರ್ಷ ಪರೀಕ್ಷಿಸಿದ ರಖಮುಗಳಿಗಿಂತ ಈ ವರ್ಷದ ರಖಮುಗಳಲ್ಲಿ ಸಾರಜನಕ ಹೆಚ್ಚಾದ ಕೇಕಡವೂ ಬಹಳ ಕಮ್ಮಿಯಾಗಿದ್ದರೂ ಸಾಮಾನ್ಯವಾಗಿ ಅವುಗಳಲ್ಲಿ ಸಸಾರ ಜನಕವು ಸಲ್ಪ ಹೆಚ್ಚಾಗಿಯೇ ಇತ್ತು. ಬಹಳವಾಗಿ ದ್ದದು ಕೇಕಡಾ 2·7ರಷ್ಟು ಇದು ಮೂಲೂರು ತಾಲ್ಲೂಕು ಅಮಲ್ದಾರ್ರವರು ಕಳುಹಿಸಿದ ಒಂದು ರಖಮು ಕನ್ನೆ ಎಲೆಯ ಲ್ಲಿತ್ತು. ಅಷ್ಟು ಹೆಚ್ಚಾಗಿ ಸಾರಜನಕವುಳ್ಳ ಇತರ ರಖಮುಗಳು ಇದ್ದವು. ಬಹಳ ಕೀಳಾದುದರಲ್ಲಿ ಕೇಕಡ 0·1ರಷ್ಟು ಮಾತ್ರ ವಿತ್ತು. ಅದು ತಿವಮೊಗ್ಗ ಡೆಪ್ಯುಟಿ ಕಮಿಷನರವರು ಕಳುಹಿಸಿದ ಒಂದು ರಖಮು ಗೋಡಿರನದಗಡ್ಡೆ—ಇತರ ರಖಮುಗಳ ಪೈಕಿ ಯಾವದಲ್ಲೂ ಇಷ್ಟು ಸ್ವಲ್ಪ ಸಾರಜನಕವಿರಲಿಲ್ಲ.

71. ಕ್ಷಾಮಕಾಲದಲ್ಲಿ ಉಪಯೋಗವಾಗುವ ಪದಾರ್ಥಗಳ ರಖಮುಗಳು ಇನ್ನೂ ಬರುತ್ತಲೇ ಇವೆ. ಇವುಗಳ ಪೋಷಣ ವನ್ನು ಕಂಡುಹಿಡಿಯಲು ಮೇಲೆ ಹೇಳಿದ ಸಾರಜನಕವೇ ಅಲ್ಲದೆ ಅದರಲ್ಲಿರುವ ಇತರ ಪದಾರ್ಥಗಳಂದರೆ ನಾರು, ತೈಲಪದಾರ್ಥ ದುಂತಾದವುಗಳ ಪರಿಮಾಣವನ್ನು ಕಂಡುಹಿಡಿಯಬೇಕಾಗಿರುವದರಿಂದ ಈ ವರ್ಷ ನಿರ್ಧರಿಸಿದ ಫಲಿತಾರ್ಥಗಳನ್ನು ನಿನೆ ವರ್ಷದ ಬಿನ್ನಪತ್ತಲೆಯ 26-28ನೆ ಪುಟಗಳಲ್ಲಿ ಕೊಟ್ಟಿರುವ ಹೋದವರ್ಷ ಕಂಡುಹಿಡಿದ ಫಲಿತಾರ್ಥಗಳನ್ನು ಈ ಕೆಲಸಕ್ಕೆಲ್ಲ ಪೂರೈ ಸಿದ ಮೇಲೆ ಒಟ್ಟಿಗೆ ಅಚ್ಚು ಹಾಕಲಾಗುತ್ತದೆ. ಈ ವಿಗ್ರಹದ ಕೆಲಸವೆಲ್ಲ ತೀರಿದನಂತರ ಮೈಸೂರು ಸರ್ಕಾರದ ನೌಕರರ ಪೈಕಿ ಕ್ಷಾಮಕಾಲದಲ್ಲಿ ಉಪಯೋಗವಾಗಿದ್ದ ಪದಾರ್ಥಗಳ ವಿಷಯದಲ್ಲಿ ಚೆನ್ನಾಗಿ ಬಲ್ಲವರಾಗಿ ಕ್ಷಾಮಕಾಲದಲ್ಲಿ ಇವುಗಳನ್ನು ಉಪ ಯೋಗಿಸುವ ಜನಗಳ ನಡೆನುಡಿಗಳನ್ನು ಅರಿತವರಾಗಿರುವ ಯಾರಾದರೂ ದೊಡ್ಡ ಹುದ್ದೇದಾರರನ್ನು ಈ ವಿಷಯದಲ್ಲೊಂದು ಉಪನ್ಯಾಸವನ್ನು ವಾರ್ಷಿಕ ರಿಪೋರ್ಟರ ಸಹಾಯ ಪಡದುಕೊಂಡು ಬರಿಯುವಂತೆ ನೇಮಿಸಿದಪಕ್ಷದಲ್ಲಿ ಅಂತಹ ಉಪನ್ಯಾಸವು ಈ ವಿಗ್ರಹದ ಫಲಿತಾರ್ಥವನ್ನು ಸೂಚಿಸುವ ಸಂಖೆಗಳಿಗಿಂತ ಬಹಳ ಉಪಯೋಗವಾಗಿರುವುದು.

ಎ. ಲೆಸ್ಲಿ,
ಕಾರ್ಖಿಕ ರಸಜ್ಞರು.

# ಮೈಸೂರು ಗೆಜೆಟ್.

ನಂ. 42.] ಸರಕಾರದಿಂದ ಫರಮಿಷ್ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಜನವರಿ ತಾ॥ 31, ಸನ್ 1907.


## IV ನೇ ಭಾಗ.

### ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 3ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀರ್ಸ ರಿಪೋರ್ಟು ಯೂ ಕಾಲಗತಿಯನ್ನು ತೋರಿಸುವ ವರದಿ
(1907ನೆಯ ವರ್ಷದ ಜನವರಿ 19ನೆಯ ತಾರೀಖು).

| ಡಿಸ್ಟ್ರಿಕ್ಟು ಮತ್ತು ಸ್ಥಳ. | ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. | | | | | | ರೂಪಾಯಿ ಬಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು. | | | |
|---|---|---|---|---|---|---|---|---|---|---|
| | ಈ ವಾರ. | | ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ. | 1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. | | | | | | |
| | | | | ಈ ವರ್ಷ. | | ಹಿಂದಿನ ಹತ್ತು ವರ್ಷಗಳ ಸರಾಸರಿ. | | 4ನೆಯ ಮುದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮುದ್ದದೊಂದಿಗೆ ಹೋಲಿಸಿದ ಲೆಕ್ಕ. | | | | |
| 1 | 2 | | 3 | 4 | | 5 | | 6 | | 7 | | | |
| | I. | c. | I. | c. | I. | c. | I. | c. | I. | c. | | ಈ ವಾರ ಸೇರುಗಳು. | ಕಳೆದ ವಾರ ಸೇರುಗಳು. | ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು |
| ಬೆಂಗಳೂರು ದಂಡು ... | ... | ... | ... | ... | ... | .. | ... | ... | ... | ... | | | | |
| ಸಿಟ್ಟು ಮತ್ತು ಹಾಲ್ಲೂರು ... | ... | ... | ... | 1 | ... | 72 | ... | 1 | + 0 | 72 | | | | |
| ಹೊಸಕೋಟೆ ... | ... | ... | ... | ... | ... | ... | ... | 4 | — 0 | 4 | | | | |
| ದೊಡ್ಡಬಳ್ಳಾಪುರ ... | ... | ... | ... | ... | ... | 14 | ... | ... | + 0 | 14 | | | | |
| ನೆಲಮಂಗಲ ... | ... | ... | ... | ... | ... | 19 | ... | ... | + 0 | 19 | | | | |
| ಕಾನಕಾನಹಳ್ಳಿ ... | ... | ... | ... | 4 | ... | 30 | ... | 10 | + 0 | 20 | | | | |
| ಮಾಗಡಿ ... | ... | .. | ... | .. | 1 | .. | ... | 0 | + 1 | 0 | ಅಕ್ಕಿ ದುಯಂ | 7·00 | 7·00 | 9·· |
| ಚನ್ನಪಟ್ಟಣ ... | ... | . | ... | .. | ... | 24 | ... | 10 | + 0 | 14 | ತರಹ | | | |
| ಆನೇಕಲ್ಲು ... | ... | .. | ... | 1 | ... | 49 | ... | 5 | + 0 | 44 | ರಾಗಿ | 15·00 | 15·50 | 19·70 |
| ದೇವನಹಳ್ಳಿ ... | ... | ... | ... | .. | 2 | 89 | ... | 2 | + 2 | 87 | ಹುರುಳಿ | 9·00 | 10·50 | ... |
| ಕ್ಲೋಸ್‌ಪೇಟೆ ... | .. | ... | ... | 1' | 1 | 66 | ... | 5' | + 1 | 61 | ಕಡಲೆ | 9·00 | 9·00 | 9·69 |
| ಡಿಸ್ಟ್ರಿಕ್ಟಿನಲ್ಲಿ ಸರಾಸರಿ ... | ... | ... | ... | 1 | ... | 76 | .... | 4 | + 0 | 72 | | | | |
| ಕೋಲಾರ ... | ... | ... | ... | 5 | ... | ... | ... | 10 | — 0 | 10 | ಅಕ್ಕಿ ದುಯಂ | 8·00 | 8·00 | 8·75 |
| ಬೌರಿಂಗ್‌ಪೇಟೆ ... | ... | ... | ... | 5 | ... | ... | ... | 8 | — 0 | 8 | ತರಹ | | | |
| ಚಿಂತಾಮಣಿ ... | .. | ... | ... | 2 | ... | 83 | ... | 19 | + 0 | 64 | ರಾಗಿ | 16·00 | 15·00 | 19·30 |
| ಮುಳಬಾಗಲು ... | ... | ... | ... | 11 | ... | ... | ... | 24 | — 0 | 24 | ಹುರುಳಿ | 12·00 | 11·00 | ... |
| ಕಿಡ್ಡಪಟ್ಟು ... | ... | ... | ... | ... | 2 | 87 | ... | 22 | + 2 | 65 | ಕಡಲೆ | 8·50 | 9·00 | 8·45 |
| ಚಿಕ್ಕಬಳ್ಳಾಪುರ ... | ... | ... | ... | ... | ... | 76 | ... | 21 | + 0 | 55 | | | | |
| ಬಾಗೇಪಲ್ಲಿ ... | ... | ... | ... | 6 | ... | 67 | ... | 8 | + 0 | 59 | | | | |
| ಗೋರಿಬಿದನೂರು ... | ... | ... | ... | ... | ... | 86 | ... | 5 | + 0 | 81 | | | | |
| ಮಾಲೂರು ... | ... | ... | ... | 1 | 1 | 34 | ... | 4 | + 1 | 30 | | | | |
| ಶ್ರೀನಿವಾಸಪುರ ... | ... | ... | ... | 4 | ... | 19 | ... | 12 | + 0 | 7 | | | | |
| ಗುಡಿಬಂಡೆ ... | ... | ... | ... | 5 | 1 | 63 | ... | 13 | +...1 | 50 | | | | |
| ಡಿಸ್ಟ್ರಿಕ್ಟಿನಲ್ಲಿ ಸರಾಸರಿ .... | ... | ... | ... | 4 | .... | 83 | .... | 13 | + 0 | 70 | | | | |